# ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 2 ಸಂಚಿಕೆ : 24 ಡಿಸೆಂಬರ್ 15 ರಿಂದ 30–1998 ಪುಟಗಳು : 24 ರೂ. 5



[ಲೇಖನ ಒಳಪುಟಗಳಲ್ಲಿ]

ವಿಶ್ವ ಪ್ರಶಸ್ತಿಗಳ ಸರದಾರ, ಅರೆಭಾಷಿಕರ ಹೆಮ್ಮೆಯ ಸುಪುತ್ರ
ಶ್ರೀ ಬೈತಡ್ಕ ಕುಂಞ್ಞಪ್ಪ ಶಶಿಧರ

# ವಿರಾಜಪೇಟೆ ತಾಲ್ಲೂಕಿನಲ್ಲಿ ಗೌಡ ಸಂಘಟನೆ

ದಿನಾಂಕ **20-12-98** ನೇ ಭಾನುವಾರ ಬೆಳಿಗ್ಗೆ **10** ಗಂಟೆಗೆ ಸರಿಯಾಗಿ ವಿರಾಜಪೇಟೆ ನಗರದ ಕಿತ್ತೂರು ಚೆನ್ನಮ್ಮ ರಸ್ತೆಯಲ್ಲಿರುವ ಕರ್ನಾಟಕ ಸಂಘದ ಕಟ್ಟಡದಲ್ಲಿ ತಾಲ್ಲೂಕು ಮಟ್ಟದ ಗೌಡ ಬಾಂಧವರ ಸಭೆಯನ್ನು ಕರೆಯಲಾಗಿದೆ. ಇದು ವಿರಾಜಪೇಟೆಯಲ್ಲಿ ಗೌಡ ಸಮಾಜವೊಂದನ್ನು ಸ್ಥಾಪಿಸುವ ಬಗ್ಗೆ ವಿಷಯ ಸಂಗ್ರಹಿಸಿ ಬಾಂಧವರ ಮತ್ತು ಮಕ್ಕಳ ಹಿತದೃಷ್ಟಿಯಿಂದ ಮುಂದಿನ ಏಪ್ರಿಲ್ ತಿಂಗಳಲ್ಲಿ ಸಮಾಜ ಸ್ಥಾಪನೆಯ ಬಗ್ಗೆ ನಿಮ್ಮೆಲ್ಲರ ಸಹಕಾರ ಪ್ರೋತ್ಸಾಹ ಕೊಡುವಂತೆಯೂ ಮತ್ತು ಸಾಕಷ್ಟು ಸದಸ್ಯರ ನೇಮಿಸುವ ನಿಟ್ಟಿನಲ್ಲಿ ತಾವುಗಳು ಖಂಡಿತ ಬಂದು ತಮ್ಮ ಅನಿಸಿಕೆಗಳನ್ನು ನೀಡಿ ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ. ಈ ಶುಭ ಸಮಾರಂಭಕ್ಕೆ "ಕೊಡಗು ಸಂಗಾತಿ" ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟೆಡ ಪ್ರಭಾಕರ್‌ರವರು ಆಗಮಿಸುವರು.

—ಸಂಘಟನ ಕಾರ್ಯದರ್ಶಿ

---


ಕೊಡಗು ಸಂಗಾತಿ "ಬಾಳ ಸಂಗಾತಿ" ಯಾಗಿ ನಮ್ಮೊಂದಿಗೆ ಇದ್ದು ಪ್ರಜ್ವಲಿಸಲೆಂದು ಹಾರೈಸುವ

**ಉಡುದೋಳಿರ ಲಕ್ಷ್ಮಣ (ಸುಗು) ಸೋಮಪ್ಪ**

ವಕೀಲರು ಮತ್ತು ನೋಟರಿ ಪಬ್ಲಿಕ್ [ಭಾರತ ಸರ್ಕಾರ]

**ತಾರಾಮಣಿ (ಮನು) ಸೋಮಪ್ಪ**

**ಮಿತ್ರವಿಂಧ್ ಸೋಮಪ್ಪ (ಮಗ)**

**ಇಂಚರ ಸೋಮಪ್ಪ (ಮಗಳು)**

**ಕಛೇರಿ ವಿಳಾಸ :**
ನಂ. 708/41, ಮಹಡಿ ಮೇಲೆ
ಶ್ರೀರಾಮಾಂಜನೇಯ ರಸ್ತೆ, ಶ್ರೀನಗರ
ಬೆಂಗಳೂರು–560 050

**ಮನೆ ವಿಳಾಸ :**
ನಂ. 259, ಮಹಡಿ ಮೇಲೆ 1ನೇ ಅಡ್ಡರಸ್ತೆ [ಗಲ್ಲಿ]
18ನೇ ಮುಖ್ಯ ರಸ್ತೆ, ಮುನೇಶ್ವರ ಬ್ಲಾಕ್,
ಬೆಂಗಳೂರು–560 026

ದೂರವಾಣಿ : **080–6671721,** ಮೊಬೈಲ್–**9844020417** ದೂರವಾಣಿ : **080–6679282**

**ಮತ್ತು**

**ಉಡುದೋಳಿರನ ಲಕ್ಷ್ಮಣ ಅಯ್ಯಪ್ಪ, ಜಾನಕಿ ಲಕ್ಷ್ಮಣ,**

**ಉಡುದೋಳಿರ ಲ. ಬೋಪಯ್ಯ, ಲಲಿತ, ಪ್ರೀತು, ಕೀರ್ತಿ**

**ಉಡುದೋಳಿರ ಲ. ಯುವಕುಮಾರ, ರೇಖ,** ಬೆಂಗಳೂರು

ಶ್ಯಾನುಭೋಗನ ಹಳ್ಳಿ ಗ್ರಾಮ, ಹಂಡ್ರಂಗಿ ಅಂಚೆ, ಕೊಣನೂರು ಹೋಬಳಿ, ಹಾಸನ ಜಿಲ್ಲೆ.

**ಕೊಡಗು ಸಂಗಾತಿ**

ಸಂಪಾದಕಿ, ಪ್ರಕಾಶಕಿ :

**ಪಟ್ಟಡ ಪಿ. ಶೀಲಾಮಣಿ**

ಗೌರವ ಸಂಪಾದಕ :

**ಪಟ್ಟಡ ಎಂ. ಪ್ರಭಾಕರ**

ಮುದ್ರಕರು :

**ಮಣ್ಣಂಡ್ರ ಕೆ. ತಮ್ಮಯ್ಯ**

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ :

**ಕೊಡಗು ಸಂಗಾತಿ**

ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು-12.
ಫೋನ್ : 0821/516771

**-ಸಂಪರ್ಕಿಸುವ ವಿಳಾಸ-**

ಮಣಿ ನಂಗಾರ್
C/o ನಂಗಾರ್ ಆಡಿಯೋ & ವೀಡಿಯೊ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 16, ಎಲ್.ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ-571237

**ಅಮ್ಮಾಜೀರ ಪೊನ್ನಪ್ಪ ಅಥವಾ ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ-080/642822

# ಒಳನೋಟ

| | ಪುಟಗಳು |
|---|---|
| ● ಸಂಪಾದಕೀಯ | 2 |
| ● ಪ್ರತಿಷ್ಠಿತ ಟಾಟಾ ಮ್ಯಾನ್ ಆಫ್ ದಿ ಇಯರ್ - 98 ಪ್ರಶಸ್ತಿ ವಿಜೇತ ಶ್ರೀ ಬೈತಡ್ಕ ಕುಂಞಪ್ಪ ಶಶಿಧರ | 3 |
| ● ವಿನೋದ | 5 |
| ● ಕವನ | 6 |
| ● ಶ್ರೀ ವೆಂಕಟರಮಣ ದೇವರ ಹರಿಸೇವೆಯಲ್ಲಿ ಮುತ್ತೈದೆಯರು ಹೇಳುವ ಹಾಡು | 7 |
| ● ಭಜನೆ – ಜ್ಞಾನ – ಆತ್ಮಶಾಂತಿ – ಮುಕ್ತಿ | 8 |
| ● ಮಾನವ ಪ್ರಕೃತಿಯ ಮೊದಲ ಪಾಪ | 9 |
| ● ಗೌಡರ ವಿವಾಹ ಪದ್ಧತಿಯ ಸೋಭಾನೆಗಳು | 10 |
| ● ಆರೋಗ್ಯ ಚಿಂತನ : ಋತು ಸ್ರಾವ [ಮುಟ್ಟು] | 11 |
| ● ಕನಸಿನ ಬದುಕು | 12 |
| ● ಮಡಿಕೇರಿಯಲ್ಲಿ ನಡೆದ ಜಾನಪದ ಲೋಕದಲ್ಲಿ ಮೇಳೈಸಿದ ಗೌಡರು | 15 |

## ಅರೆ ಭಾಷಿಕ ವಿಭಾಗ

| | |
|---|---|
| ● ಕರಿ ಚಿನ್ನ ಧಾರವಾಹಿ ಭಾಗ-17 | 16 |
| ● ಪ್ರತಿಭಾವಂತ ಕಲೆಗಾರ ನೇರಂಗಿ ಎಸ್. ತೇಜಕುಮಾರ | 17 |
| ● ನಮ್ಮ ಮನೆ ಚಾವುಂಡಿ | 18 |
| ● ಅಕಾಡಮಿ ವತಿಯಿಂದ ಆಚರಿಸಲ್ಪಟ್ಟ ಹುತ್ತರಿ ಹಬ್ಬದಲ್ಲಿ ತೆಗೆದ ಚಿತ್ರ | 20 |

**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

# ಸಂಪಾದಕೀಯ:

## ಸಾಕುಪ್ರಾಣಿಗಳ ಸ್ಥಿತಿ

ಹಿಂದೂ ಧರ್ಮದಲ್ಲಿ ಗೋಮಾತೆ ಎಂಬುದಾಗಿ ಪಶುಗಳನ್ನು ಪೂಜಿಸುತ್ತಾರೆ. ರೈತನಿಗೆ ಗೋವು ಇಲ್ಲದಿದ್ದರೆ ಅವರ ಜೀವನವೇ ಸಾಧ್ಯವಿಲ್ಲ. ಆದರೆ ಆ ಗೋವುಗಳನ್ನು ನಮ್ಮ ಗ್ರಾಮಗಳಲ್ಲಿ ಸಾಕುವ ರೀತಿಯಂತೂ ಬಹಳ ಹೀನ ರೀತಿಯದು. ನಮ್ಮಲ್ಲಿರುವ ದನದ ಕೊಟ್ಟಿಗೆಗಳು ಹುಲ್ಲಿನ ಅಥವಾ ಹೆಂಚಿನ ಛಾವಣಿಗಳಿದ್ದು, ಮಳೆಗಾಳಿಯ ಹೊಡೆತವನ್ನು ತಡೆಯುವುದಕ್ಕೆ ತಕ್ಕದಾದ ಗೋಡೆ ಬಾಗಿಲುಗಳಿಲ್ಲದೆ ಅವು ಮಲಗುವ ಕೊಟ್ಟಿಗೆಯ ನೆಲವಂತೂ ಸೆಗಣಿ ಕೆಸರಿನಿಂದ ಕೂಡಿದ್ದು, ಕೆಲವು ಸಲ ಗುಂಡಿ ಗುಡಿಪಿನಿಂದ ಮೂಕ ಪಶು ಇಡೀ ರಾತ್ರಿ ನಿಂತೇ ಕಾಲ ಕಳೆಯುವ ಪರಿಸ್ಥಿತಿ ಬೇಕಾದಷ್ಟು ಇದೆ. ಕೊಡಗಿನ ರೈತರಲ್ಲಿ ದನ ಸಾಕುವ ವಿಷಯದಲ್ಲಿ ಯಾವ ನಿಗವೂ ಇಲ್ಲ. ಪುರಾತನ ಕಾಲದ ಬಳುವಳಿಯನ್ನೇ ಮುಂದುವರಿಸಿಕೊಂಡೇ ಬರುತ್ತಿದ್ದೇವೆ ಹೊರತು ಆಧುನಿಕ ಸಲಕರಣೆಗಳನ್ನು ಒದಗಿಸಿಕೊಂಡು ನಮ್ಮ ಜಾನುವಾರುಗಳನ್ನು ಉತ್ತಮ ರೀತಿಯಲ್ಲಿ ಸಾಕುವ ಮನಸ್ಸೇ ಮಾಡಲಿಲ್ಲ. ಆದ್ದರಿಂದ ನಮ್ಮ ಹಳ್ಳಿಯ ಗೋವುಗಳು ಬಹಳ ಸೊರಗಿ, ಕೆಲವಕ್ಕ ಸಗಣಿ ಹಾಕುವುದಕ್ಕೂ ಕಷ್ಟದ ರೀತಿಯಲ್ಲಿ ದನಗಳನ್ನು ಸಾಕುತ್ತಿದ್ದೇವೆ.

ಹಿಂದಿನ ಕಾಲದಲ್ಲಿ ದನ ಮೇಯುವುದಕ್ಕೆ ಬೇಕಾದಷ್ಟು ಬಾಣೆಗಳಿದ್ದು ಅವುಗಳಲ್ಲಿ ಯಥೇಚ್ಛ ಹುಲ್ಲು ಬೆಳೆಯುತ್ತಿತ್ತು. ಈಗ ಆ ಬಾಣೆಗಳೆಲ್ಲಾ ಕಾಫಿ ತೋಟಗಳಾಗಿವೆ. ಈಗ ದನಗಳು ರಸ್ತೆಯ ಬದಿಯ ಹುಲ್ಲನ್ನು ಮಾತ್ರ ಮೇಯುತ್ತವೆ. ಬೇಸಿಗೆ ಕಾಲದಲ್ಲಂತೂ ದನಗಳ ಪಾಡು ಹೇಳತೀರದು. ಭತ್ತದ ಒಣ ಹುಲ್ಲು ಬಿಟ್ಟರೆ ದನಗಳಿಗೆ ಹಸಿಹುಲ್ಲು ಒದಗಿಸುವ ಪ್ರಮೇಯವೇ ಇಲ್ಲ. ದನಗಳ ಮೇವಿಗಾಗಿ ಪ್ರತ್ಯೇಕವಾದ ಹುಲ್ಲು ಬೆಳೆಸುವ ಏರ್ಪಾಡೇ ಇಲ್ಲ. ಎರಡು ಮೂರು ಎಕ್ರೆ ಜಮೀನುದಾರನೂ 100 ಎಕ್ರೆ ಜಮೀನುದಾರನ ಪರಿಸ್ಥಿತಿಯೂ ಈ ವಿಷಯದಲ್ಲಿ ಒಂದೇ ಆಗಿದೆ. ಪಶುಸಂಗೋಪನೆಯ ವಿಷಯದಲ್ಲಿ ಕೊಡಗಿನ ರೈತರು ಬಹಳ ಹಿಂದಿದ್ದಾರೆ. ಬಡಕಲಾದ ಹತ್ತು ಹದಿನೈದು ಗೋವುಗಳಿರುವುದಕ್ಕಿಂತ ಒಳ್ಳೆಯ ಧೃಡ ಕಾಯ, ಆರೋಗ್ಯವಂತ ತಳಿಯನ್ನು ಸಾಕುವ ಮನಸ್ಸೇ ಮಾಡಿರುವುದಿಲ್ಲ.

ಕೊಡಗಿನ ರೈತರು ಗೋವುಗಳನ್ನಲ್ಲದೆ ಹಂದಿ, ಕೋಳಿಗಳನ್ನೂ ಹೆಚ್ಚಿನ ಜನರು ಸಾಕುತ್ತಿದ್ದಾರೆ. ಹಂದಿಗಳನ್ನು ಕಟ್ಟಿ ಸಾಕುವ ಕ್ರಮವೇ ಇಲ್ಲ. ಆಹಾರ ಹಾಕುವಾಗ ಮಾತ್ರ "ಕುಟಬೋ" "ಕುಟ್ಟಬೋ" ಎಂಬುದಾಗಿ ಜೋರಾಗಿ ಕರೆದು ಸ್ವಲ್ಪ ಗಂಜಿ, ಸ್ವಲ್ಪ ತೌಡು ಮಿಶ್ರ ಮಾಡಿದ ಆಹಾರವನ್ನು ಒಂದು ದೋಣಿಯ ಆಕಾರದಲ್ಲಿರುವ ಮರದ 'ಮರಗಿಲ್''ನಲ್ಲಿ ಹುಯ್ದು ನಂತರ ಹಂದಿ ಎಲ್ಲಾದರೂ ಹೋಗಿ ಯಾರದಾದರೂ ತೋಟ ತೊಡಿಗೆಯನ್ನು ಹಾಳು ಮಾಡಿದರೂ ಚಿಂತೆ ಇಲ್ಲದವರ ಹಾಗೆ ನಿಶ್ಚಿಂತೆಯಿಂದ ಇರುತ್ತಾರೆ. ಇದರ ಬದಲು ಹಂದಿಗಳಿಗೊಂದು ಒಳ್ಳೆಯ ಗೂಡು ನಿರ್ಮಿಸಿ ಬರೀ ಒಂದಿಷ್ಟು ತೌಡು ಗಂಜಿ ನೀರನ್ನು ಹಾಕಿ ಒಂದು ಕುಟುಂಬದಲ್ಲಿ 4 ಯ 5 ಬಡಕಲು ಹಂದಿಗಳನ್ನು ಸಾಕುವ ಬದಲು ಒಳ್ಳೆಯ ತಳಿ ಒಂದೆರಡು ಹಂದಿಗಳನ್ನು ಸಾಕಿ ಅವುಗಳಿಗೆ ನಮ್ಮಲ್ಲಿ ಯಥೇಚ್ಛ ಸಿಗುವ ಹಲಸಿನ ಕಾಯಿ ಹಣ್ಣು, ಪರಂಗಿ ಹಣ್ಣು ಇತ್ನಿತರ ಹಂದಿಗಳು ತಿನ್ನುವ ತರಕಾರಿ, ಸೊಪ್ಪು ಪದಾರ್ಥಗಳನ್ನು ಬೇಯಿಸಿ ಹಾಕಿದರೆ ಬೇಗ ಬೇಗನೆ ಬೆಳೆದು ಅವುಗಳ ಗೊಬ್ಬರವನ್ನು ಶೇಖರಿಸಿ ಬೆಳೆಗಳಿಗೆ ಗೊಬ್ಬರವಾಗಿ ಉಪಯೋಗಿಸಬಹುದು. ಇದೇ ರೀತಿ ಕೋಳಿ ಸಾಕಣೆಯಲ್ಲೂ ಸಹ ಉತ್ತಮ ತಳಿಯನ್ನು ತನ್ಮಿಂದ ಸಾಧ್ಯವಾಗುವಷ್ಟನ್ನೂ ಗೂಡಿನಲ್ಲಿ ಹಾಕಿ ಸಾಕಿದರೆ ಸ್ವೇಚ್ಛೆಯಾಗಿ ತಿರುಗಿ ತನ್ನ ಮಲವನ್ನು ಹೋದ ಹೋದಲ್ಲಿ ಹಾಕಿ ಹೊಲಸು ಮಾಡುವುದನ್ನು ತಪ್ಪಿಸಬಹುದು. ದನ, ಹಂದಿ, ಕೋಳಿಗಳನ್ನು ಸಾಕಿ ಸರಿಯಾದ ಹುಲ್ಲು, ಆಹಾರ, ನೀರು ಕೊಟ್ಟರೆ ಉತ್ಪತ್ತಿಯೂ ಹೆಚ್ಚಿ ವಾತಾವರಣವೂ ಶುಚಿಯಾಗಿದ್ದು ನೆರೆ ಕರೆಯವರಿಗೆ ಕಿರುಕುಳ ತಪ್ಪಿ ನಮ್ಮ ಸಮಾಜದ ಅಂತಸ್ತು ಹೆಚ್ಚುವುದೆಂಬ ಬಯಕೆ ಸಂಗಾತಿಯದು. ●

---

## ನಿವೇದನೆ

ಕೊಡಗು ಸಂಗಾತಿ ಪತ್ರಿಕೆಯ ಅರೆಭಾಷೆ ವಿಭಾಗಕ್ಕೆ ಬರೆಯುವ ಲೇಖಕರು ಸಾಧ್ಯವಾದಷ್ಟ ಜನಾಂಗದ ಹಳೆ ಪದಗಳನ್ನು ಬಳಸುವಂತೆ ನಮ್ಮ ನಿವೇದನೆ. ಮತ್ತು ಪುಟದ ಒಂದೇ ಮಗ್ಗುಲಿಗೆ ಬರೆದು ಕಳುಹಿಸುವಂತೆ ಕೋರಿಕೆ. ಸಾಕಷ್ಟು ಅಂಚೆ ಚೀಟಿಯನ್ನು ಲಗತ್ತಿಸಿರಬೇಕು. ಸಮಾಜಕ್ಕಾಗಿ ದುಡಿದು ತ್ಯಾಗ, ಬಲಿದಾನ ಮಾಡಿ ಕಣ್ಮರೆಯಾದ ಹಿರಿಯರ ಕುರಿತು ಲೇಖನವನ್ನು ಈಗಿರುವ ಮಕ್ಕಳು, ಮರಿಮಕ್ಕಳು ಬರೆದು ತಿಳಿಸುವಂತೆ ನಮ್ಮ ಪ್ರಾರ್ಥನೆಯಾಗಿದೆ. ಪತ್ರಿಕೆಯ ಅಭಿವೃದ್ಧಿ ಬಗ್ಗೆ ಕಾಳಜಿಯಿರುವ ಹಿತೈಷಿಗಳು ಜೀವಾವಧಿ ಸದಸ್ಯತನ, ಪೋಷಕರಾಗಿ, ಮಹಾಪೋಷಕರಾಗಿ ಧನಸಹಾಯ ಮಾಡುವಂತೆ ನಮ್ಮ ಮನವರಿಕೆಯಾಗಿದೆ. ಕೊ. ಸ. ಜನಾಂಗದ ಪತ್ರಿಕೆಯಾದ್ದರಿಂದ ಜನಾಂಗದ ಉದಾರಿಗಳಿಂದಲೇ ಪತ್ರಿಕೆ ಬೆಳೆಯಬೇಕು. ಕೊ. ಸ. ಜನಾಂಗದ ಅಭಿವೃದ್ಧಿಗೆ ಪೂರಕವಾಗುವಂತಹ ಕಾರ್ಯಕ್ರಮವನ್ನು ಆಗಿಂದಾಗ್ಗೆ ಹಮ್ಮಿಕೊಳ್ಳಲು ತಮ್ಮ ಸಹಕಾರ ಅವಶ್ಯವಾಗಿದೆ. —ಸಂ.

# ಪ್ರತಿಷ್ಠಿತ ಟಾಟಾ ಮ್ಯಾನ್ ಆಫ್ ದಿ ಇಯರ್-98 ಪ್ರಶಸ್ತಿ ವಿಜೇತ ಶ್ರೀ ಬೈತಡ್ಕ ಕುಂಞಪ್ಪ ಶಶಿಧರ

ಬೈತಡ್ಕ ಕುಂಞಪ್ಪ ಶಶಿಧರ ಇವರು ಮೂಲತಃ ಕೊಡಗಿನ ಪಾಲೂರು ಗ್ರಾಮದ ಬೈತಡ್ಕ ಆರ್. ಕುಂಞಪ್ಪ ಮತ್ತು ಹೇಮ ದಂಪತಿಗಳ ಪುತ್ರರಾಗಿದ್ದಾರೆ. ಶ್ರೀಯುತರ ವ್ಯಕ್ತಿ ಪರಿಚಯವು ಕೊಡಗು ಸಂಗಾತಿಯ ಸಂಪುಟ 1, ಸಂಚಿಕೆ 2, ಏಪ್ರಿಲ್ 16-30-1997ರಲ್ಲಿ ಪ್ರಕಟಿತವಾಗಿರುತ್ತದೆ. ಇವರ ಅಂತರಾಷ್ಟ್ರ ಮಟ್ಟದ ಮೂಕಾಭಿನಯ ಕಲೆಗೆ ಲಭಿಸಿದ ಪ್ರಶಸ್ತಿಗಳು ಅದ್ಭುತ. ಇದು ನಮ್ಮ ಜನಾಂಗಕ್ಕೆ ಹೆಮ್ಮೆ ತರುವ ವಿಚಾರ. 26 ವರ್ಷದ ಶ್ರೀಯುತರು ದಾಂಪತ್ಯ ಜೀವನಕ್ಕೆ ಸದ್ಯದಲ್ಲಿಯೇ ಹೆಜ್ಜೆಯನ್ನಿಡುತ್ತಿದ್ದಾರೆ. ಇವರಿಗೆ ಕೊಡಗು ಸಂಗಾತಿಯು ಶುಭ ಹಾರೈಸುತ್ತದೆ.

**ಇವರ ಸಾಧನೆಗಳು :**

○ 1995ರಲ್ಲಿ ಮಾಲ್ಡೀವ್ಸ್, ಮಾರಿಷಷ್, ಬಾಲಿ, ಜರ್ಮನಿ ಹಾಗೂ ಫ್ರಾನ್ಸ್ ದೇಶಗಳಲ್ಲಿ ನಡೆದ "ಭಾರತ ಸಾಂಸ್ಕೃತಿಕ ಉತ್ಸವ"ದಲ್ಲಿ ಮೂರು "ಅಂತರರಾಷ್ಟ್ರೀಯ ಎಕ್ಸಲೆನ್ಸ್ ಎವಾರ್ಡ್" ಹಾಗೂ ಒಂದು "ಬೆಸ್ಟ್ ಫರ್‌ಫಾರ್‌ಮೆನ್ಸ್" ಪ್ರಶಸ್ತಿ. ಭಾರತ ತಂಡದಲ್ಲಿದ್ದ ದಕ್ಷಿಣ ಭಾರತದ ಏಕೈಕ ಪ್ರತಿನಿಧಿ.

○ ಇಂಡೋನೇಷ್ಯಾದ ಜಕಾರ್ತದಲ್ಲಿ ನಡೆದ "ಸೆಮಿನಾರ್ ಆನ್ ಕಲ್‌ಚರಲ್ ಡೆವಲಪ್‌ಮೆಂಟ್ ಇನ್ ಏಷ್ಯಾ" ಸಮಾರಂಭದಲ್ಲಿ ಭಾರತದ ಏಕೈಕ ಪ್ರತಿನಿಧಿಯಾಗಿ ಭಾಗವಹಿದ್ದಾರೆ.

○ ಅಖಿಲಭಾರತ ಅಂತರ ವಿಶ್ವವಿದ್ಯಾಲಯ ಮೇಳದಲ್ಲಿ "ಬೆಸ್ಟ್ ಔಟ್ ಸ್ಟಾಡಿಂಗ್ ಸ್ಟುಡೆಂಟ್ ಎವಾರ್ಡ್-95" ಪ್ರಶಸ್ತಿ.

○ 1996ರ ಜನವರಿ 26 ರಂದು ರಿಪಬ್ಲಿಕ್ ಡೇ ಸಮಾರಂಭದಲ್ಲಿ "ರಾಜೀವಗಾಂಧೀ ರಾಷ್ಟ್ರೀಯ ಯುವ ಪ್ರಶಸ್ತಿ 96". ಈ ಪ್ರಶಸ್ತಿ ಪಡೆದಿರುವ ಭಾರತದ ಅತ್ಯಂತ ಕಿರಿಯ ವಯಸ್ಸಿನ ಹಾಗೂ ದಕ್ಷಿಣ ಭಾರತದ ಏಕೈಕ ವ್ಯಕ್ತಿ.

○ ದೆಹಲಿಯಲ್ಲಿ ನಡೆದ "ಅಖಿಲಭಾರತ ಸಾಂಸ್ಕೃತಿಕ ಉತ್ಸವದಲ್ಲಿ" ಕರ್ನಾಟಕ ತಂಡದಲ್ಲಿ ಭಾಗವಹಿಸಿ-"ಉತ್ತಮ ಮೂಕಾಭಿನಯ ಪಟು" ಪ್ರಶಸ್ತಿ ಹಾಗೂ "ಆಲ್ ರೌಂಡರ್" ಪ್ರಶಸ್ತಿ.

○ ಹಾಲೆಂಡ್ ದೇಶದಲ್ಲಿ ಜರುಗಿದ-"ವಿಶ್ವ ಸಾಂಸ್ಕೃತಿಕ ಮೇಳದಲ್ಲಿ" ಭಾರತ ತಂಡದ ನಾಯಕನಾಗಿ ಭಾಗವಹಿಸಿದ್ದು

— "ವಿಶ್ವ ಶ್ರೇಷ್ಠ ಮೂಕಾಭಿನಯ ಪ್ರಶಸ್ತಿ"

— "ಬೆಸ್ಟ್ ಆಲ್ ರೌಂಡರ್ ಪ್ರಶಸ್ತಿ"

— "ವಿಶ್ವ ಪ್ರಶಸ್ತಿ" ಪಡೆದಿರುವ ವಿಶ್ವದ ಕಿರಿಯ ವಯಸ್ಸಿನ ವ್ಯಕ್ತಿ.

— "ವಿಶ್ವ ಆರೋಗ್ಯ ಸಂಸ್ಥೆಯು" ಸದಸ್ಯತ್ವ ಪಡೆದಿರುವ ದಕ್ಷಿಣ ಭಾರತದ ಏಕೈಕ ಹಾಗೂ ಕಿರಿಯ ವಯಸ್ಸಿನ ವ್ಯಕ್ತಿ.

○ 1997ರಲ್ಲಿ ನಡೆದ "ಕೊಡಗು ಉತ್ಸವ"ದಲ್ಲಿ ಸನ್ಮಾನಿತರಾದ ಕೊಡಗು ನಾಡಿಗಾಗಿ ಸೇವೆ ಸಲ್ಲಿಸಿದ ಗಣ್ಯವ್ಯಕ್ತಿಗಳಲ್ಲಿ ಕಿರಿಯವರು. "ಕೊಡಗು ಉತ್ಸವ" ಪ್ರಶಸ್ತಿ.

○ ಕೂಡಿಗಿ ಪ್ರತಿಷ್ಠಾನ ಕೊಡಮಾಡುವ "ದಕ್ಷಿಣ ಕನ್ನಡ ಜಿಲ್ಲಾ ವರುಷದ ವ್ಯಕ್ತಿ-97" ಪ್ರಶಸ್ತಿ.

○ ಕುಂದಾಪುರದಲ್ಲಿ ಜರುಗಿದ "ರಾಜ್ಯ ಯುವಜನ ಮೇಳದಲ್ಲಿ "ರಾಜ್ಯ ಪ್ರಶಸ್ತಿ 97".

○ ನಮಸ್ತೆ ಪ್ರತಿಷ್ಠಾನದವರ "ವರುಷದ ಶ್ರೇಷ್ಠ ವ್ಯಕ್ತಿ 97" ಪ್ರಶಸ್ತಿ.

○ ಜೂನಿಯರ್ ಛೇಂಬರ್ ಇಂಟರ್‌ನ್ಯಾಷನಲ್ ಕೊಡ ಮಾಡುವ "ಯೂತ್ ಆಫ್ ದಿ ಇಯರ್-97"

○ 1998ರಲ್ಲಿ ಟಾಟಾ ಪ್ರಾಯೋಜಿತ ಸ್ವಾಮ್ಸ್ ಪ್ರತಿಷ್ಠಾನದವರ "ಟಾಟಾ ಮ್ಯಾನ್ ಆಫ್ ದಿ ಇಯರ್ 98" ರಾಷ್ಟ್ರೀಯ ಪ್ರಶಸ್ತಿ.

* ಈ ಪ್ರಶಸ್ತಿ ಪಡೆಯುವ ಮೂಲಕ, ಎರಡು ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ದಕ್ಷಿಣ್ಯ ಭಾರತದ ಏಕಮಾತ್ರ ವ್ಯಕ್ತಿ.

* 1998ರಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯವರು ನಡೆಸಿದ ಸಮಾರಂಭದಲ್ಲಿ ಸನ್ಮಾನ.

* ಉತ್ತಮ ಚಿತ್ರಕಲಾವಿದರಾಗಿರುವ ಇವರು "ಬಾಹುಬಲಿ ಮಸ್ತಾಭಿಷೇಕ ರಾಜ್ಯ ಪ್ರಶಸ್ತಿ" ಪಡೆದಿರುತ್ತಾರೆ.

* ರಾಷ್ಟ್ರ ಮಟ್ಟದ ಕ್ರೀಡಾಪಟು ಕೂಡ ಆಗಿದ್ದು ಕರ್ನಾಟಕ ತಂಡವನ್ನು 8 ಬಾರಿ ಪ್ರತಿನಿಧಿಸಿದ್ದು ಅಖಿಲಭಾರತ ಕ್ರೀಡಾಕೂಟದಲ್ಲಿ ಎರಡು ಚಿನ್ನದ ಪದಕ ಪಡೆದಿದ್ದು, ರಾಜ್ಯ ಮಟ್ಟದಲ್ಲಿ ಅನೇಕ ಪದಕಗಳನ್ನು ಪಡೆದಿದ್ದಾರೆ ದಸರಾ ರಾಜ್ಯ ಕ್ರೀಡಾಕೂಟದ ಚಿನ್ನದ ಪದಕ ಪಡೆದಿದ್ದಾರೆ. [ಕಾಲು ನೋವಿನ ಕಾರಣ ಕ್ರೀಡೆಯಿಂದ ಸಂಪೂರ್ಣ ಹೊರಗಿರಬೇಕಾಯಿತು.]

* ಜರ್ಮನಿ, ಫ್ರಾನ್ಸ್, ಹಾಲೆಂಡ್, ಮಾಲ್ಡೀವ್ಸ್, ಮಾರಿಷಸ್, ಬಾಲಿ, ಈಜಿಪ್ಟ್, ಇಂಡೋನೇಷ್ಯಾ, ಸಿಂಗಾಪೂರ್ ಕಜಕ್, ಬುಡಾಪೆಸ್ಟ್, ಮಾಲಿ–ಹೀಗೆ ಹದಿನೆಂಟು ರಾಷ್ಟ್ರಗಳಲ್ಲಿ 150ಕ್ಕಿಂತಲೂ ಹೆಚ್ಚಿನ ಕಾರ್ಯಕ್ರಮ ಮೇಳಗಳಲ್ಲಿ ಭಾಗ ವಹಿಸಿದ್ದಾರೆ.

* ಅನಾಥರಿಗಾಗಿ ಚಾರಿಟಿ ಕಾರ್ಯಕ್ರಮಗಳಲ್ಲಿ ಭಾಗ ವಹಿಸುತ್ತಿರುವ ಇವರು. ರೋಟರ್‍ಯಾಕ್ಟ್, ಲಿಯೋ ಸಾಮಾಜಿಕ ಸಂಘ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿದ್ದಾರೆ.

* ಯುವ ತರಬೇತಿ ಕಾರ್ಯಕ್ರಮಗಳನ್ನು ಬಿಡುವಿನ ಸಮಯದಲ್ಲಿ ನಡೆಸಿಕೊಡುತ್ತಾರೆ. ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ ನಡೆದಿರುತ್ತದೆ. ಪ್ರಸ್ತುತ ರೋಮ್‌ದೇಶದ ಅಮೇರಿಕನ್ ಕಂಪನಿಗಳಲ್ಲಿ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

—ಪಟ್ಟಡ ಪ್ರಭಾಕರ್

## ಗೌಡ ಸಾಂಸ್ಕೃತಿಕ ಅಕಾಡೆಮಿಯಿಂದ ಹುತ್ತರಿ ಆಚರಣೆ

ಡಿಸಂಬರ್ 3 ರಂದು ರಾತ್ರಿ ಮಡಿಕೇರಿಯ ಕೊಡಗು ಗೌಡ ವಿದ್ಯಾ ಸಂಘದ ಕಟ್ಟಡದಲ್ಲಿ ಸೇರಿ 8 ಗಂಟೆಗೆ ನೆರೆಕಟ್ಟಿ, 9 ಗಂಟೆಗೆ ಕೂಡಕಂಡಿ ಅಪ್ಪಾಜಿಯವರ ಪ್ರಾರ್ಥನೆ ಮೂಲಕ, ಜನಾಂಗದ ಪ್ರಮುಖರು ಮತ್ತು ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕ ಪಟ್ಟಡ ಪ್ರಭಾಕರ್‌ರವರು ಕದಿರು ಕುಯ್ದರು.

ಆ ಸಂದರ್ಭದಲ್ಲಿ ಅಕಾಡೆಮಿಯ ಕಾರ್ಯದರ್ಶಿ ಕೋಡಿ ಚಂದ್ರಶೇಖರ್, ಖಜಾಂಚಿ ಪಳ್ಳಿಪುರ ಭರತ್, ಗೌಡ ವಿದ್ಯಾ ಸಂಘದ ಕಾರ್ಯದರ್ಶಿ ಕೋಳುಮುಡಿಯನ ಅನಂತ್‌ಕುಮಾರ್, ಪುರಸಭಾ ಸದಸ್ಯ ಬಿಟ್ಟೀರ ರಾಮಯ್ಯ, ಕಿತ್ತೂರು ಚೆನ್ನಮ್ಮ ಮಹಿಳಾ ಸಮಾಜದ ಅಧ್ಯಕ್ಷೆ ಪೊನ್ನಚನ ಲಲಿತ ಸೋಮಣ್ಣ, ಗೌಡ ಮಹಿಳಾ ಒಕ್ಕೂಟದ ಸಂಚಾಲಕಿ ಬೈತಡ್ಕ ಜಾನಕಿ ಬೆಳ್ಯಪ್ಪ ಪಾಲ್ಗೊಂಡಿದ್ದರು.

ರಾತ್ರಿ 9 ಗಂಟೆಗೆ ಕದಿರು ತೆಗೆದ ಅನಂತರ ಸೇರಿದ ಜನಾಂಗಾಭಿಮಾನಿಗಳಿಗೆ ಫಲಹಾರ ನೀಡಿ ಕದಿರು ವಿತರಿಸಲಾಯಿತು. ಕೊನೆಯಲ್ಲಿ ಅಕಾಡೆಮಿ ಕಾರ್ಯದರ್ಶಿ ಕೋಡಿ ಚಂದ್ರಶೇಖರ್ ಅವರು ವಂದನೆಯನ್ನು ಸಲ್ಲಿಸಿದರು.

ವರದಿ : ಕೋಡಿ ಚಂದ್ರಶೇಖರ್

## ಕೋಲಾಟವೋ–ಹೊಡೆದಾಟವೊ ?

ಒಂದು ದಿವಸ ನಾನು ನನ್ನ ಗೆಳೆಯನ ಮನೆಗೆ ಹೋಗಿದ್ದೆ ಅವರ ಊರಲ್ಲಿ ಯಾವುದೋ ಒಂದು ಸಮಾರಂಭ ನಡೆಯುತ್ತಿತ್ತು ನಾನು ಮತ್ತು ನನ್ನ ಗೆಳೆಯ ಆ ಸಮಾರಂಭಕ್ಕೆ ಹೋಗಿ ಕುಳಿತುಕೊಂಡೆವು ನಂತರ ಭಾಷಣ, ಹಾಡು, ವಂದನಾರ್ಪಣೆ, ಕ್ರೀಡೆ ಮೊದಲಾದ ಕಾರ್ಯಕ್ರಮ ನಡೆಯಿತು ಕೊನೆಗೆ ಎಲ್ಲಾ ಕಾರ್ಯಕ್ರಮದಲ್ಲಿ ಇದ್ದ ಹಾಗೆಯೇ ಸಾಂಸ್ಕೃತಿಕ ಕಾರ್ಯಕ್ರಮವು ಇತ್ತು. ಇದೇ ಆ ಸಮಾರಂಭದ ವಿಶೇಷವಾಗಿತ್ತು

ಮೊದಲು ಎರಡು–ಮೂರು ಹುಡುಗಿಯರು ಒಂದು ಹಾಡು ಹೇಳಿ ಹೋಟ ನಂತರ ಕೋಲಾಟವು ಆರಂಭವಾಯಿತು. ಕೋಲಾಟದಲ್ಲಿ ಒಂದು ಗುಂಪು ಇನ್ನೊಂದು ಗುಂಪಿಗೆ ಕೋಲು ಕುಟ್ಟುವುದು ಸಾಮಾನ್ಯವಾದ ಸಂಗತಿ. ಆದರೆ ಈ ಕೋಲಾಟದಲ್ಲೊಂದು ಅನಾಹುತ ಆಯಿತು. ಅದೇನೆಂದರೆ ಕೋಲನ್ನು ಕುಟ್ಟುತ್ತಾ–ಕುಟ್ಟುತ್ತಾ ಒಬ್ಬನ ಕೈಯ ಗಂಟೆಗೆ 'ಲೊಟ್' ಅಂಥ ಬಡಿಯಿತು. ನೋವನ್ನು ತಾಳಲಾಗದ ಅವನು ಬೇಕು ಅಂಥ ಅವನ ಕೈಯ ಗಂಟೆಗೆ 'ಲೊಟ್' ಅಂಥ ಹೊಡೆದ ಕೊನೆಗೆ ಈ ಕೋಲಾಟವು ಬೆಳೆದು 'ಚಟಪಟ, ಚಟಪಟ' ಅಂಥ ಹೊಡೆದಾಡಿದರು ಅಲ್ಲಿ ನೆರೆದ ಜನರಿಗೂ, ನನಗೂ ತಲೆಬಿಸಿಯಾಗಿ ಇದು ಕೋಲಾಟವೊ ಹೊಡೆದಾಟವೋ? ಅಂಥ ಕೊನೆಗೆ ಕಣ್ಣು ಅರಳಿಸಿ ನೋಡಿದರೆ ಅದು ಹೊಡೆದಾಟವಾಗಿತ್ತು. ●

—ಯಾಳದಾಳು ಅಶೋಕ ಈ.

## ನಗೆ ಹನಿ

'ಹುಡುಗಿಗೆ ಅಡಿಗೆ ಬರುತ್ತೆ, ಸಂಗೀತ ಬರುತ್ತೆ, ನಾನು ಅವಳನ್ನೇ ಮದುವೆ ಆಗೋದು' ಎಂದ ಮೋಹನ.

'ನಾನು ಒಪ್ಪೊಲ್ಲ' ಎಂದಳು ತಾಯಿ.

'ಕಾರಣವಾದರೂ ಹೇಳು.'

'ಅವಳು ಕರಾಟೆ ಕಲಿತಿದ್ದಾಳೆ ಕಣೋ !!

# ವಿನೋದ...

ತರಗತಿಯೊಳಗೆ ಅಧ್ಯಾಪಕರು ಪ್ರವೇಶಿಸಿ ತರಗತಿಯನ್ನು ವೀಕ್ಷಿಸಿ :—

ಅಧ್ಯಾಪಕ : ಏನೂ... ಈ ದಿನ ತರಗತಿಯಲ್ಲಿ ವಿದ್ಯಾರ್ಥಿನಿಯರು ಯಾರೂ ಕಾಣಿಸ್ತಿಲ್ಲ ?

ಓರ್ವ ವಿದ್ಯಾರ್ಥಿ : ಅವರನ್ನು ಕಾಣಬೇಕಾದರೆ ಬಸಪ್ಪ ಸಿನಿಮಾ ಮಂದಿರಕ್ಕೆ ಹೋಗಬೇಕು ಸಾರ್...!

ಅ : ಅಲ್ಲೇನು ಪ್ರೋಗ್ರಾಂ ?

ವಿ : ಬ್ಲೂ ಫಿಲ್ಮ್ ಪ್ರದರ್ಶನ ಸಾರ್...ಅದಕ್ಕೆ ಹುಡುಗಿಯರೆಲ್ಲಾ ಕ್ಲಾಸಿಗೆ ಚಕ್ಕರ್ ಹೊಡೆದು ಹೋಗಿದ್ದಾರೆ ಸಾರ್

ಅ : ಕಾಲ ಕೆಟ್ಹೋಯ್ತು...!

ಅಧ್ಯಾಪಕರು ಹಾಜರು ಪುಸ್ತಕ ತೆಗೆಯುತ್ತಾ

ರಾಮು : ಪ್ರೆಸೆಂಟ್ ಸಾರ್

ರಾವಣ : ಓಡಿಹೋಗಿದ್ದಾನೆ ಸಾರ್.

ಅ ! ಯಾವೂರಿಗೊ ?

ವಿ : ರಾತ್ರೋರಾತ್ರಿ ಸೀತೆಯನ್ನ ಹೊತ್ತುಕೊಂಡು ಲಂಕೆಗೆ ಓಡ್ಹೋಗಿದ್ದಾನೆ ಸಾರ್ !

ಅ : ಎಲಾ ಇವ್ನಾ...

ಧರ್ಮರಾಯ : ಪ್ರೆಸೆಂಟ್ ಸಾರ್

ದುರ್ಯೋಧನ

ವಿ : ಸಾರಿ ಸಾರ್

ಅ : ಏನಾಯ್ತೊ ಅವನಿಗೆ

ವಿ : ಭೀಮ ಅವನ ತೊಡೆ ಮುರ್ದ್ಹಾಕ್ಬಿಟ್ಟ ಸಾರ್

ಅ : ಭೀಮನಿಗೆ ಏನಾಯ್ತಪ್ಪಾ...

ವಿ : ಭೀಮನಿಗೆ ಏನಾಗಲಿಲ್ಲ ಸಾರ್...ದುರ್ಯೋಧನ ಡಾ॥ ಚನ್ನಬಸಪ್ಪ ಆಸ್ಪತ್ರೆಯಲ್ಲಿ ಅಡ್ಮಿಟ್

ಭರತ : ಪ್ರೆಸೆಂಟ್ ಸಾರ್

ಲಕ್ಷ್ಮಣ :

ವಿ : ಕ್ಲಾಸಿಗೆ ಬರಕ್ಕೆ ನಾಚ್ಕೆ ಆಗ್ತದೆ ಅಂದಸಾರ್...

ಅ : ಅವನಿಗ್ಯಾಕೋ ನಾಚಿಕೆ

ವಿ : ಸಾರ್ ಲಕ್ಷ್ಮಣನ ದಿನಾ...ಸೂರ್ಪನಕಿ ನನ್ನನ್ನು ಮದುವೆ ಆಗು ಆಗು...ಅಂಥ ಹಿಂದೆ ಮುಂದೆ ತಿರ್ಗ್ಯಾಡುತ್ತಿದ್ದಳಂತೆ ಸಾರ್...ಲಕ್ಷ್ಮಣನಿಗೆ ಕೋಪ ಬಂದು ಅವ್ಳ ಕಿವಿ, ಮೂಗು, ಸ್ತನ, ಕತ್ತರಿಸಿ ಹಾಕ್ಬಿಟಂತೆ ಸಾರ್...!

ಅ : ಯಾರೂ...! ಈ ತರಗತಿಯ ಶೂರ್ಪನಕಿಯೆ ! ?

ವಿ : ಅಲ್ಲ ಸಾರ್ ರಾವಣನ ತಂಗಿ

ಅ : ಹಿಗ್ಮಾಡಿ ಲಕ್ಷ್ಮಣನಿಗೇನು ಬಂತೊ ?

ವಿ : ಲಕ್ಷ್ಮಣನಿಗೇನು ಬಂತು ಸಾರ್.. ನಮ್ಮ ಉತ್ತಪ್ಪನವರ ರೆಕಮಂಡ್‌ನಿಂದ ಶೂರ್ಪನಕಿಗೆ ಮಾಸಿಕ 'ತ್ರಿಬಲ್' ಅಂಗವಿಕಲ ವೇತನ ಸಿಕ್ಕುವಂತಾಯ್ತು ಸಾರ್

ಭೀಷ್ಮ ಪ್ರೆಸೆಂಟ್ ಸಾರ್

ದುಶ್ಯಾಸನ :

ವಿ : ಬರಲಿಲ್ಲ ಸಾರ್...ಹೇಳಕ್ಕೆ ನಾಚ್ಕೆ ಆಗ್ತದೆ ಸಾರ್

ಅ : ಅದೇನು ಹೇಳಪ್ಪಾ...

ವಿ : ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆ ಪೂರ್ತಿ ಬಿಚ್ಬಿಟ್ನಂತೆ ಸಾರ್

ಅ : ಅವನಿಗೇನು ತಲೆ ಕೆಟ್ಹೋಗಿದ್ದೇನೊ ?

ವಿ : ಅವನ ತಲೆ ಕೆಟ್ಹೋಗಿಲ್ಲ ಸಾರ್—ಆದರೆ ದ್ರೌಪದಿ ಮಾನಗೆಟ್ಹೋಯ್ತು...!

ಗುಂಡಾ ..

ವಿ : ಇನ್ನು ಸ್ವಲ್ಪದರಲ್ಲಿ ಬರ್ತಾನೆ ಸಾರ್...ಪಾಪ ಅವನಿಗೆ ಅಟೆಂಡೆನ್ಸ್ ಕೊಡಿ ಸಾರ್ .. ನಾನು ಅವನು ಜೊತೆಯಲ್ಲಿ ಬಂದೆವು ಸಾರ್... ಮೇಘನ ಬಾರ್ ಕಂಡು ಬಾರೊ ಮೇಘನಕ್ಕೆ ಹೋಗಾನ ಅಂದ ಸಾರ್...ನಾನು ಬರಕ್ಕಿಲ್ಲ ಅಂದೆ ಸಾರ್ ಚಳಿ ಕಣೋ...ಸ್ವಲ್ಪ ಗುಂಡು ಹಾಕಿ, ಗುಟ್ಕಾ ತಿಂದು ನಿಧಾನಕ್ಕೆ ಬರ್ತೀನಿ ಅಂದ ಸಾರ್...

ಅ : ಬರ್ಲಿ ಕ್ಲಾಸಿಗೆ, ಗುಂಡಾ...ಗುಂಡು...ಕುಟ್ಕಾ... ಏಟು ಏಣ್ಸಿ ಕೊಡ್ತಿನಿ...!

ವಿ : ಸಾರ್...ಸತೀಶ, ಪ್ರಸನ್ನ, ಅರವಿಂದ, ಜಗ್ಗು, ಮಾಧು ಇವರು ಲೀವ್ ನೋಟ್ ಕೊಟ್ಟಿದ್ದಾರೆ. ಒಂದು ವಾರ ರಜೆ ಬೇಕಂತೆ ಸಾರ್...ಇವರೆಲ್ಲಾ ಮುಕ್ಕಂದೂರಿನವರು ಸಾರ್

ಅ : ಅವರಿಗೇನು ರೋಗ ಬಂತೊ ?

ವಿ : ಸಾರ್...ಅದು ಒಂದು ಥರಾ ರೋಗ ಸಾರ್... ಅವರು ಐವರು ಧರ್ಮಸ್ಥಳ ದೇವರ ದರ್ಶನಕ್ಕೆ ಹೋಗಿದ್ದಾಗ ಅಲ್ಲಿನ ಧರ್ಮಾಧಿಕಾರಿಗಳು 95 ಜೋಡಿ ಸಾಮೂಹಿಕ ವಿವಾಹ ಏರ್ಪಡಿಸಿದರಂತೆ ಸಾರ್.. [ಇವರಿಗೆಲ್ಲಾ ಕ್ರಿಕೆಟ್ ಹುಚ್ಚು] ನರ್ವಸ್ ನೈಟ ಕಣ್ರೋ.. ಸೆಂಚುರಿ ಹೊಡಿಯಲೇ ಬೇಕೆಂದು ಕ್ಷಣ ಮಾತ್ರದಲ್ಲಿ ಅಲ್ಲಿ ಇಲ್ಲಿ ತಡಕಾಡಿ ಐವರು ಒಂದೊಂದು 'ಗೂಡೆ'ಗಳನ್ನು ಸೆಲೆಕ್ಟ್ ಮಾಡ್ಕೊಂಡು ಸೆಂಚೂರಿ ಸಾಮೂಹಿಕ ವಿವಾಹ ನಡ್ದೆ ಹೋಯ್ತಂತೆ ಸಾರ್. ಅವರ 'ಗೂಡೆ'ಗಳೆಲ್ಲಾ ಶೂರ್ಪನಕಿಗಿಂತ ಬ್ಯೂಟಿಯಾಗಿದ್ದಾರಂತೆ ಸಾರ್...! ಆಮೇಲೆ ನನಗೆ ಫೋನ್ ಮಾಡಿದ್ದರು ಸಾರ್ ದಿಢೀರ್ ಮದುವೆ ಆಗೋಯ್ತು ಕಣೋ. ಆಮಂತ್ರಣ ಕಳಿಸಲು ಸಾಧ್ಯ

ವಾಗಲಿಲ್ಲ...ಮುಂದಿನ ವರ್ಷ ಇದಕ್ಕೆ ಮೊದಲಾಗಿ ಸಾಮೂಹಿಕ 'ನಾಮಕರಣದ' ಪತ್ರಿಕೆ ಕೊಡ್ತೀವಿ...ದಯವಿಟ್ಟು ಮಾಸ್ಟ್ರಿಗೆ ತಿಳಿಸಿಬಿಡು ಅಂದ್ರು ಸಾರ್...

ಅ : ಲೋಫರ್ ನನ್ನ ಮಕ್ಳು !

ಶೀಲಾ...

ವಿ : ವೆರಿ ಸಾರಿ ಸಾರ್...ಪಾಪ !

ಅ : ಏನಾಯ್ತು ಅವಳಿಗೆ ?

ವಿ : ಶೀಲ ಕೆಡ್ಸಿ ಬಿಟ್ರು ಸಾರ್...ಅವಳ ಶೀಲ ಕೆಡ್ಸಿ ಬಿಟ್ರು ನಿನ್ನೆ ದಿನ ರಾತ್ರಿ ಅವಳು ಗಂಡು ಮಗುವಿಗೆ ಜನ್ಮ ಕೊಟ್ಟಿದ್ದಾಳೆ ಸಾರ್...

ಅ : ಹೌದಾ ! ನಿಜನಾ...!

ವಿ : ಸಾರ್...ನೀವು ಒಂದು ವರ್ಷದಿಂದ ಪಾಠ ಮಾಡಿ ಮಾಡಿ ಮಾಡಿ ..ಆ ಮಗು ನಿಮ್ಮ ಥರನೇ ಇದೆ ಸಾರ್ !

ಕಂಗ್ರಾಟ್ಸ್ ಸಾರ್ !

ಅ : [ಮನಸ್ಸಿನಲ್ಲೇ] ಬಂತಲ್ಲಾ ಗ್ರಹಚಾರ...!

ವಿ : ಕೊನೆಯದಾಗಿ ಎರಡು ಮಾತು ಸಾರ್...ನೀವು ಗುರುಗಳು. ನಾನು ಶಿಷ್ಯ. ಈಗಿನ ಸಮಾಜದ ವಾತಾವರಣವೇ 'ಉಲ್ಟಾ ಪಲ್ಟಾ' ಮನನೊಂದು ಹೇಳ್ತಿದ್ದೀನಿ ಸಾರ್... ದ್ವಾಪರ ಯುಗದ ಮಹಾಭಾರತ ಚರಿತ್ರೆಯಲ್ಲಿ ಗುರು ದ್ರೋಣ ಚಾರ್ಯರಿಗೆ ಶಿಷ್ಯ ಏಕಲವ್ಯ ಗುರುದಕ್ಷಿಣೆಯಾಗಿ ತನ್ನ ಬಲಗೈ ಹೆಬ್ಬೆರಳನ್ನೇ ಕತ್ತರಿಸಿ ಕೊಟ್ಟನಂತೆ ಸಾರ್ ಆದರೆ ಕಲಿ ಯುಗದ ಭಾರತದ ಚರಿತ್ರೆಯಲ್ಲಿ ನಿಮ್ಮಂತಹ ಗುರುಗಳು ಅದ ರಲ್ಲಿಯೂ ನೀವು ಮುಗ್ಧ ಶಿಷ್ಯೆ ಶೀಲಾಳಿಗೆ ಶಿಷ್ಯೆದಕ್ಷಿಣೆಯಾಗಿ ಮಗುವನ್ನೇ ಕೊಟ್ಟಿದ್ದೀರಾ...ಗಾಡ್ ಬ್ಲೆಸ್ ಯು ಸಾರ್... ಗಾಡ್ ಬ್ಲೆಸ್ ಯು

ಸಾರ್ ಲಾಂಗ್ ಬೆಲ್ಲ್ ಆಯಿತು...ಗುಡ್ ಇವ್ನಿಂಗ್ ಸಾರ್...ಗಾಡ್ ಬ್ಲೆಸ್ ಯು ಸಾರ್ ●

—ಕೆ. ಕೆ. ಗೋಪಾಲ, ಮುಕ್ಕಂದೂರು.

## ಅರೆಭಾಷೆ ಗೌಡರ ಹಿರಿಮೆ

ಕೊಡಗಿನ ಅರೆಭಾಷೆ ಗೌಡರು ನಾವು
ಈ ಪಾವನ ನಾಡಲಿ ಜನಿಸಿಹೆವು
ನಿಸರ್ಗದ ಸಿರಿ–ಸೊಬಗುಗಳ ತವುರು ಮನೆ ನಮ್ಮದು
ಗಿರಿ–ಶಿಖರ, ನದಿ–ಜಲಪಾತಗಳ ಊರು ನಮ್ಮದು.

ಭಾಗಮಂಡ್ಲ ನಾಡು ನಮ್ಮ ಅರೆಭಾಷೆ ಗೌಡರ ನಾಡು
ಪಕ್ಕದ ತಾವೂರು ಕೋಳಿಬೈಲು ನಮ್ಮ ಜನ್ಮ ಬೀಡು
ಬ್ರಹ್ಮಗಿರಿ ಬೆಟ್ಟ ನೋಡಲು ಚೆಂದ
ಕಾವೇರಿ ನದಿಯು ಉಗಮ ಇಲ್ಲಿಂದ.

ಪರಿಶ್ರಮ ದುಡಿಮೆಗೆ ನಿದರ್ಶನರು ನಾವು
ಧೈರ್ಯ–ಸಾಹಸ ಕೃತ್ಯಗಳಿಗೂ ಹಿಂಜರಿಯಲಾರೆವು
ಬತ್ತ ಬೆಳೆಯುವ ಮೂಲವೃತ್ತಿ ನಮ್ಮದು
ಕಾಫಿ, ಏಲಕ್ಕಿ, ತರಕಾರಿ ಬೆಳೆದ ಉಪವೃತ್ತಿಯೂ
ನಮ್ಮದು.

ವಿದ್ಯೆ–ಪ್ರತಿಭೆಗಳುಳ್ಳವರು ನಮ್ಮಲ್ಲಿ ಹಲವರು
ಹುದ್ದೆ ನಿಮಿತ್ತ ಬೆಂಗಳೂರಲ್ಲಿ ನೆಲೆಸಿಹರು
ನಾವು ಎಲ್ಲಿಯೇ ಇರಲಿ ಎಂತದೆ ಮಾಡಲಿ
ಯಾವುದೇ ವೃತ್ತಿಯಲ್ಲಿ ತೊಡಗಿರಲಿ ಮರೆಯದಿರು ನೀ.

ಕೊಡಗಿನ ಅರೆಭಾಷೆ ಗೌಡರೆಂಬುದು ನಮಗಿರಲಿ
ಭಾಷೆ, ಸಂಸ್ಕೃತಿ–ಸಂಪ್ರದಾಯಗಳನ್ನು
ತೊರೆಯದಿರೋಣ

ನಮ್ಮವರ ಒಳಿತು–ಏಳಿಗೆಗಳಿಗಾಗಿ ಶ ಮಿಸೋಣ
ಸ್ಥಾಪಿತ ಸಂಘದ ಧ್ಯೇಯವನು ಸಾರ್ಥಕ ಗೊಳಿಸೋಣ
ನಾವು ಅರೆಭಾಷಿಕರು. ಕೊಡಗು ಸಂಗಾತಿಯನ್ನು
ಬೆಳೆಸೋಣ.

—ಕೋಳಿಬೈಲು ನಾಣಯ್ಯ, ಬೆಂಗಳೂರು.

## ಹಾಸ್ಯ ಚಟಾಕಿ

ಪಾರ್ಕಿನಲ್ಲಿ ಗಂಡ-ಹೆಂಡತಿಯರಿಬ್ಬರು ಕುಳಿತಿದ್ದರು.

ದೂರದಲ್ಲಿ ಕತ್ತೆಯೊಂದು ಮೇಯುತ್ತಿರುವುದನ್ನು ನೋಡಿದ ಗಂಡ

'ನೋಡೇ ನಿಮ್ಮ ಸಂಬಂಧಿಕರ್ಯಾರೋ ಬಂದಿದ್ದಾರೆ' ಎಂದ

ಸಿಟ್ಟುಗೊಳ್ಳದ ಹೆಂಡತಿ ಸಂತೋಷದಿಂದ

'ನಮಸ್ಕಾರ ಮಾವನವರಿಗೆ' ಎಂದು ಕತ್ತೆಗೆ ಕೈಮುಗಿ ದಳು.

—ಎಂ. ಸತೀಶ್, ಮಹದೇವಪುರ.

## ಹಿತನುಡಿ

ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯ ದವನಿಗೆ ಯಾವಾಗ ಮಾತನಾಡಬೇಕು ಎಂಬುದು ತಿಳಿಯು ವುದಿಲ್ಲ.

# ಶ್ರೀ ವೆಂಕಟರಮಣ ದೇವರ ಹರಿಸೇವೆಯಲ್ಲಿ ಮುತ್ತೈದೆಯರು ಹೇಳುವ ಹಾಡು

ಸಣ್ಣಾ ಸಣ್ಣಾ ನಾಮ ಸಣ್ಣಾ ನೀಲಿಯ ನಾಮಾ ಎಷ್ಟೊಂದು
ನಾಮಾ ಹರಿನಾಮಾ । ಎಷ್ಟೊಂದು ನಾಮಾ ಹರಿನಾಮ
ವೆಂಕಟನಾಮ ಹಳ್ಳ್ಯದ ಸಾಲಲಿ ಹರಿಸೇವೆ ॥

ಹಳ್ಳ್ಯದ ಸಾಲಲಿ ಹರಿಸೇವೆ ವೆಂಕಟನಾಮ
ಶನಿವಾರ-ದಾ ಶಂಖ । ನುಡಿದಾವು ಶನಿವಾರ–ದಾ
ಶಂಕ ನುಡಿದಾವು ವೆಂಕಟರಮಣ ಗಿರಿಯ ಮೇಲಾದ ಹರಿಸೇವೆ॥

ಗಿರಿಯಾ ಮೇಲಾದ ಹರಿಸೇವೆ ವೆಂಕಟನಾಮ
ಶನಿವಾರ ದಾ ಶಂಕ ನುಡಿದಾವು । ಶನಿವಾರ–ದಾ
ಶಂಕ ನುಡಿದಾವು ವೆಂಕಟರಮಣ ಅಣ್ಣಾ ಗೋಲಾಡಿ
ಬರುತ್ತಾರೆ ॥

ಅಣ್ಣಾನ ಗಿರಿ ಮೇಲೆ ಬಣ್ಣ ಒಂದೆರಡಿಕ್ಕಿರೆ
ಬಣ್ಣಾ ತುಂಬೀರೆ ಗಿರಿಗೆಲ್ಲಾ । ಬಣ್ಣಾ ತುಂಬೀರೆ
ಗಿರಿಗೆಲ್ಲಾ ತಕುನೈನ–ಹೊನ್ನು ತುಂಬೀರೆ ಕಳಶಕ್ಕೆ ॥

ಅಪ್ಪಾನ ಗಿರಿಮೇಲೆ ಕೊಪ್ಪು ಒಂದೆರಡಿಕ್ಕಿರೆ
ಕೊಪ್ಪು ತುಂಬೀರೆ ಗಿರಿಗೆಲ್ಲಾ । ಕೊಪ್ಪು ತುಂಬೀರೆ
ಗಿರಿಗೆಲ್ಲ ತಕುನೈನ–ಮುತ್ತು ತುಂಬೀರೆ ಕಳಶಕ್ಕೆ ॥

ಹೊತ್ತು ಹೊತ್ತಿನ ಸ್ವಾಮಿ ಯಾಕಾಗಿ ಹೋಗಿದಿರಿ ಸ್ವಾಮಿ
ಅಣ್ಣಾನ ಮನೆಯ ಕುಲಸ್ವಾಮಿ ?–ಅಣ್ಣಾನ ಮನೆಯ
ಕುಲಸ್ವಾಮಿ ವೆಂಕಟರಮಣ ಅಣ್ಣಾ ಗೋಲಾಡಿ ಬರುತಾರೆ ॥

ಸಂಜೆ–ಯ ಹೊತ್ತಿನಲಿ ಯಾಕಾಗಿ ಹೋಗಿದಿರಿ ಸ್ವಾಮಿ
ಅಪ್ಪಾನ ಮನೆಯ ಕುಲಸ್ವಾಮಿ ? ಅಪ್ಪಾನ ಮನೆಯಾ
ಕುಲಸ್ವಾಮಿ ವೆಂಕಟರಮಣ–ಅಣ್ಣಾ ಗೋಲಾಡಿ ಬರುತ್ತಾರೆ ॥

ಹಾಲು ಕಾಸೀವಿ ಹರಿವಾಣ ಬೆಳಗೀವಿ
ಕಿತ್ತಾಳೆ ಹಣ್ಣಾ ಮಡಗೀವಿ ಕಿತ್ತಾಳೆ ಹಣ್ಣಾ
ಸುಲಿದೀವಿ ವೆಂಕಟರಮಣ ಕಿಚ್ಚೆದ್ದು ಬರುವಾ ಪರಿಷೆಗೆ ॥

ತುಪ್ಪ ಕಾಸೀವಿ, ಕೊಪ್ಪನ್ನ ಬೆಳಗೀವಿ ಬಾಳೇಯ
ಹಣ್ಣಾ ಸುಲಿದೀವಿ । ಬಾಳೇಯ ಹಣ್ಣಾ ಸುಲಿದೀವಿ
ವೆಂಕಟರಮಣ_ಮಿಂದೆದ್ದು ಬರುವಾ ಭಕುತರಿಗೆ ॥

ಸ್ವಾಮಿಯ ಪೂಜೆಗೆ ಏನೇನು ತರಬೇಕು? ಕರಿಯಾ ಕಬ್ಬಿನ ಜಲ್ಲೆ
ಎಳಿಯಾ ತೆಂಗಿನಕಾಯಿ ಯಾಲಕ್ಕಿ ಬೆಲ್ಲಾ ಒಳ್ಳೆ ಮೆಣಸು।
ಯಾಲಕ್ಕಿ ಬೆಲ್ಲಾ ಒಳ್ಳೆ ಮೆಣಸು ಸ್ವಾಮಿಯ ಪೂಜೆಗೆ
ಘನವಾದೊ ಸ್ವಾಮಿಗುಣದ ಮುಂದೆ ಘನವಾದೊ ॥

ಸ್ವಾಮಿಯ ಮದುವೆಗೆ ಭೂ–ಮೆಲ್ಲ ಚಪ್ಪರ,
ಯಾಲಕ್ಕಿ ಕಂಬಾ ತಳವಾರ । ಯಾಲಕ್ಕಿ ಕಂಬಾ
ತಳವಾರ ಸ್ವಾಮಿಗೆ–ಸ್ವಾಮಿಯ ಮದುವೆ ಶನಿವಾರ ॥

ಶನಿವಾರ–ದಾ ಶಂಖ ನುಡಿದಾವು
ಎಲ್ಲಾ ದೇವರಿಗೆ ಎಣ್ಣೇಲಿ ದೀವಿಗೆ ನಮ್ಮೊಡೆಯ
ತಿಮ್ಮಪ್ಪನಿಗೆ ತುಪ್ಪದ ದೀವಿಗೆ ಉರುಸ್ಯಾರು, ಎಣ್ಣೇಲಿ ಜ್ಯೋತಿ
ಬೆಳಗ್ಯಾರು ॥

ಸ್ವಾಮಿ ಗುಣದ ಮುಂದೆ ಆರತಿ ಎತ್ತಿ
ತುಪ್ಪದ ದೀವಿಗೆ ಉರುಸ್ಯಾರು। ಎಣ್ಣೇಲಿ ಜ್ಯೋತಿ ಬೆಳಗ್ಯಾರು
ಎಣ್ಣೇಲಿ ಜ್ಯೋತಿ ಉರಿದಾವು ॥

ಹಾರು ಕಚ್ಚೆಯ ಹಾಕಿ ಜರಿಯ ಮುಂಡಾಸು ಕಟ್ಟಿ
ಮೂರು ನಾಮವ ಧರುಸ್ಯಾರು । ಮೂರು ನಾಮವ
ದರುಸ್ಯಾರು ನಮ್ಮ ಸ್ವಾಮಿ ಜೋಳಿಗೆ ಹಿಡಿದು ।
ಜೋಳಿಗೆ ಹಿಡಿದೂ, ಬೆಟ್ಟಾದ ಮೇಲೆ ಹೊರಟಾರು
ಗಿರಿಯನ್ನು ಹತ್ತುತ್ತ, ಕಿರು ಬೆವರ ಒರೆಸುತ್ತ
ಎಡ ಬಲದ ಶಂಖಾ ನುಡಿಸುತ್ತ । ಎಡಬಲದ
ಶಂಖಾ ನುಡಿಸುವ ಸ್ವಾಮಿಗೆ
ಗಿರಿಯಾ ಮೇಲೊಂದು ಹರಿ–ಸೇವೆ ಸ್ವಾ–ಮಿ–ಗೆ
ಮಂಗ–ಳಾರತಿ ಜಯ–ಮಂಗ–ಳಾರತಿ
ನಿತ್ಯಾ–ಶುಭ–ಮಂಗ–ಳಾರತೀ...

ಇಂದಿನ ಸಮಾಜದಲ್ಲಿ ಬಹುಮುಖ್ಯವಾದ, ಮಹತ್ತರವಾದ, ಶ್ರೇಷ್ಠವಾದ ಜನಾಂಗದ ಆರಾಧ್ಯ ದೈವವಾದ ಶ್ರೀ ವೆಂಕಟರಮಣ ದೇವರ ಹರಿಸೇವೆಯ ಕ್ರಮವನ್ನು ಈ ಪೀಳಿಗೆಗೆ ಮನವರಿಕೆ ಮಾಡಲು ಗೌಡ ಮಹಿಳಾ ಒಕ್ಕೂಟ ಕೊಡಗು, ಮಡಿಕೇರಿ ಇವರು ಸೂಕ್ತ ಕ್ರಮ ಕೈಗೊಂಡು ಸಾರ್ವಜನಿಕವಾಗಿ ಸಾಂಸ್ಕೃತಿಕ ಸಮಾರಂಭಗಳಲ್ಲಿ ಪ್ರದರ್ಶನ ನೀಡಿ ಜನ ಮನ್ನಣೆ ಗಳಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ನವಂಬರ್ ಕೊನೆ ವಾರದಲ್ಲಿ ಮಡಿಕೇರಿಯಲ್ಲಿ ನಡೆದ ರಾಜ್ಯ ಮಟ್ಟದ ಕರ್ನಾಟಕ ಜಾನಪದ ಮೇಳದಲ್ಲಿ ಭಾಗವಹಿಸಿ ಪ್ರಶಂಸೆಗೆ ಪಾತ್ರವಾಗಿದೆ.

ಸಂಗ್ರಹ : ಬೈತಡ್ಕ ಜಾನಕ್ಕಿ ಬೆಳ್ಯಪ್ಪ,
ಸಂಚಾಲಕಿ : ಗೌಡ ಮಹಿಳಾ ಒಕ್ಕೂಟ ಕೊಡಗು, ಮಡಿಕೇರಿ.

# ಭಜನೆ-ಜ್ಞಾನ-ಆತ್ಮಶಾಂತಿ-ಮುಕ್ತಿ

ನಾಸ್ತಿಕತೆಯೇ ಹೆಚ್ಚಾಗಿರುವ ಇಂದಿನ ಸಮಾಜದಲ್ಲಿ ಆಸ್ತಿಕತೆಯ ಕಡೆಗೆ ಮನಹೊರಳುವುದು ದುರ್ಲಭವಾಗಿದೆ ದೇವರಿರಲಿ, ಕಣ್ಣಿಗೆ ಕಾಣುವ ಗುರುಹಿರಿಯರಲ್ಲಿ ಇರಬೇಕಾದ ಪೂಜ್ಯ ಭಾವನೆಯೂ ಕೂಡ ನಶಿಸುತ್ತಿದೆ. ವಿಜ್ಞಾನದ ಮುನ್ನಡೆ ಲೌಕಿಕ ಜೀವನಕ್ಕೆ ಬೇಕಾದ ಸುಖದ ಸೋಪಾನವನ್ನು ನಿರ್ಮಿಸಿ ಕೊಡಬಲ್ಲುದೇ ಹೊರತು ಆತ್ಮ ಶಾಂತಿಯನ್ನು ಖಂಡಿತಾ ತಂದು ಕೊಡಲಾರದು. ಲೌಕಿಕ ಜೀವನವನ್ನೇ ಅಂತಿಮ ಗುರಿಯಾಗಿ ಟ್ಟುಕೊಂಡಿರುವ ಈ ಕಾಲದ ಜನರಿಗೆ ಚಿತ್ತ ಸ್ವಾಸ್ಥ್ಯವು ದೊರೆಯದಾಗಿದೆ. ಚಿತ್ತ ಶುದ್ಧಿ ಇಲ್ಲದ ಮನುಷ್ಯ ಜ್ಞಾನಿಯೇ ?

**ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು**

ಎಂಬ ದಾಸ ಶ್ರೇಷ್ಠ ಪುರಂದರದಾಸರ ಪದದ ಸಾಲುಗಳು ಇದನ್ನು ಸಾರಿ ಹೇಳುತ್ತದೆ. ತನ್ನನ್ನು ತಾನು ಅರಿಯದ ಜ್ಞಾನ ವನ್ನು ಜ್ಞಾನ ಎಂದು ಹೇಳಬಹುದೆ ?

ಪರಮಾತ್ಮನು ಪ್ರಪಂಚವನ್ನು ಸೃಷ್ಟಿ ಮಾಡಿದನು. ಅಲ್ಲಿ ಜೀವಿಗಳನ್ನು ಸೃಷ್ಟಿ ಮಾಡಿದನು. ಆಮೇಲೆ ತನ್ನ ಅಂಶ [ಆತ್ಮ] ವನ್ನು ಜೀವಿಗಳ ಅಂತರಂಗದ ಗುಹೆಯಲ್ಲಿ ಅವಿತ್ತಿಟ್ಟನು.ಜೀವಿಗಳ ಲೆಲ್ಲಾ ಅತ್ಯಂತ ಬುದ್ಧಿವಂತ ಜೀವಿ ಮನುಷ್ಯ. ಏಕೆಂದರೆ ದೇವರು ಅವನಿಗೆ ಬುದ್ಧಿ ಕೊಟ್ಟನು ಮತ್ತು ಎದುರಿನಲ್ಲೇ ಸುಖೋಪ ಭೋಗದ ಆಮಿಷವನ್ನೂ ಇಟ್ಟನು. ಈ ಮನುಷ್ಯ ಆಮಿಷದ ಬಲೆಯಲ್ಲಿ ಸಿಲುಕಿ ತನ್ನ ಬುದ್ಧಿವಂತಿಕೆಯನ್ನು ವಿಜ್ಞಾನದತ್ತ ಹೊರಳಿಸಿದನೇ ಹೊರತು ತನ್ನ ಅಂತರಾತ್ಮನತ್ತ ಹೊರಳಿಸ ಲಿಲ್ಲ. ಹಾಗೆ ಕಂಡುಕೊಳ್ಳಲು ಪ್ರಯತ್ನ ಪಟ್ಟವರು ಬಹಳ ಕಡಿಮೆ. ಕೇವಲ ಕೆಲವು ಮಂದಿ ತನ್ನ ಅಂತರಾತ್ಮನ ಕಡೆ ಹೊರಳಿ ತನ್ಮಯರಾಗಿರುವವರೂ ಇರುವರು. ಇವರೇ ನಿಜ ವಾದ ಜ್ಞಾನಿಗಳು. 'ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟು ಕುರುಡ' ಎಂಬ ಪುರಂದರದಾಸರ ಪದಗಳು ನೆನಪಿಗೆ ಬರುತ್ತದೆ. ಯಾವ ವಿಜ್ಞಾನಿಯೂ ಈ ಅಂತರಂಗದ ಒಳಹೊಕ್ಕು ಆತ್ಮನ ಇರುವಿಕೆಯನ್ನಾಗಲಿ, ಅದರ ಸ್ವರೂಪದ ಬಗ್ಗೆಯಾಗಲಿ ಸಂಶೋಧನೆ ನಡೆಸುತ್ತಿಲ್ಲ. ಹಾಗೊಂದು ವೇಳೆ ಲೌಕಿಕವಾದ ಪ್ರಯತ್ನದಿಂದ ಫಲ ಶೂನ್ಯವೆಂದು ಹೇಳಬಹುದು. ಹಾಗಾದರೆ ಆತ್ಮನನ್ನು ಕಾಣಬಹುದೇ? ಪರಮಾತ್ಮನನ್ನು ನೋಡಬಹುದೇ? ಖಂಡಿತಾ ನೋಡಬಹುದು. ಹೇಗೆಂದರೆ ಪಂಚೇಂದ್ರಿಯಗಳನ್ನು ಒಳ ಸೆಳೆಯುವುದು, ಅಂದರೆ ಬಾಹ್ಯ ಪ್ರಪಂಚಕ್ಕೆ ಸ್ಪಂದಿಸದೇ [ಕುರುಡರಾಗಿ] ತನ್ನೊಳಗೇ ತಾನು ಲೀನವಾಗಿ ತನ್ನ ಅಂತ ಚಕ್ಷುವನ್ನು ತೆರೆದು ನೋಡಿದಾಗ ಗಾಢಾಂಧಕಾರ ಮಾಯ ವಾಗಿ ಅಲ್ಲಿ ಜ್ಞಾನದ ಬೆಳಕು ಅತ್ಯಂತ ಪ್ರಕಾಶಮಾನವಾಗಿ ಕಾಣಿಸುವುದು. ಅಲ್ಲಿ ಯಾವ ರಾಗದ್ವೇಶಗಳೂ ಇರುವುದಿಲ್ಲ. ಅದೇ ಆತ್ಮ. ಆತ್ಮನ ಪ್ರಕಾಶದಲ್ಲಿ ಪರಮಾತ್ಮನ ಮೇಲಿನ ಭಕ್ತಿ, ಪ್ರೇಮ, ಪ್ರಶಾಂತವಾದ ವಾತಾವರಣ ಮಾತ್ರ ಗೋಚ ರಿಸುತ್ತದೆ ಆಗ ನಮ್ಮ ಹೃದಯ ಕಮಲದಲ್ಲಿ ಉಪಸ್ಥಿತವಿರುವ ನಮ್ಮ ಇಷ್ಟದೈವವು ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಹ ಸ್ಥಿತಿಯನ್ನು ಧ್ಯಾನ, ಸಮಾದಿ ಎಂದರು.

ನಮ್ಮ ಒಲವು ಪರಮಾತ್ಮನ ಕಡೆಗೆ ಹೇಗೆ ಇರಬೇಕೆಂದರೆ ಸಣ್ಣ ಮಗುವೊಂದು ತಾಯಿಗಾಗಿ ಹಂಬಲಿಸುವಂತಿರಬೇಕು. ಅನೇಕ ವೇಳೆ ಕೆಲಸದ ಒತ್ತಡಕ್ಕೆ ಸಿಲುಕಿದ ತಾಯಿ ತನ್ನ ಮಗು ವನ್ನು ದಂಡಿಸುತ್ತಾಳೆ. ಆದರೆ ಮಗು ತಾಯಿ ದಂಡಿಸಿತೆಂದು ತಾಯಿಯನ್ನು ಬಿಟ್ಟು ದೂರ ಹೋಗುವುದಿಲ್ಲ. ಹೊಡೆದರೂ, ದೂರ ತಳ್ಳಿದರೂ ಮತ್ತೆ ಮತ್ತೆ ಬಂದು ಕಾಲಿಗೇ ಸುತ್ತಿಕೊಳ್ಳು ತ್ತದೆ. ಈ ಸಾಮಾನ್ಯ ದೃಶ್ಯವನ್ನು ಎಲ್ಲರೂ ನೋಡಿರಬಹುದು. ತನ್ನ ತಾಯಿಯನ್ನು ಹೊಂದಬೇಕೆಂದು ಆ ಮಗುವು ಹಂಬಲಿಸಿ ಪ್ರಯತ್ನ ಪಡುವುದು ಅದೇ ರೀತಿಯಲ್ಲಿ ಹಂಬಲಿಸಿ [humble boy] ಪ್ರೀತಿಯಿಂದ ಪ್ರಾರ್ಥಿಸಿದರೆ ದೇವರು ಓಡೋಡಿ ಬರುತ್ತಾನೆ. ಇದು ಅಷ್ಟು ಸುಲಭವಲ್ಲ, ಆದರೆ ಕಷ್ಟವೂ ಅಲ್ಲ, ಸಾಧನೆ ಮುಖ್ಯ 'ಮೇ ಹೃದಯ ಕಪಿಂ ಅತ್ಯಂತ ಚಪಲಂ' [ನನ್ನ ಮನಸ್ಸೆಂಬ ಮರ್ಕಟವು ಅತ್ಯಂತ ಚಪಲ ವಾಗಿದೆ] ಎಂದು ಆದಿ ಗುರು ಶಂಕರಾಚಾರ್ಯರು ತಮ್ಮ 'ಶಿವಾನಂದ ಲಹರಿ'ಯಲ್ಲಿ ಹೇಳಿದ್ದಾರೆ. ಬಾಲ ಬ್ರಹ್ಮಚಾರಿಯೂ, ಸನ್ಯಾಸಿಯೂ ಆದ ಇವರೇ ಹೀಗೆ ಹೇಳಬೇಕಾದರೆ ನಮ್ಮಂಥ ಹುಲು ಮಾನವರ ಪಾಡೇನು ? ಕಡಿವಾಣವಿಲ್ಲದ ಕುದುರೆಯಂತಿ ರುವ ನಮ್ಮ ಮನಸ್ಸಿಗೆ ಪ್ರಯತ್ನವೆಂಬ ಕಡಿವಾಣವನ್ನು ಹಾಕಿ ದಾರಿ ತಪ್ಪಿದಾಗಲೆಲ್ಲಾ ಎಳೆತಂದು ಅಂತರಂಗದ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿ ಅಂತರ್ಮುಖಿಯಾಗುವ ಹಾಗೆ ಮಾಡಬೇಕು. ಮರಳಿ ಮರಳಿ ಯತ್ನವ ಮಾಡಿದರೆ ಯಶಸ್ಸು ಖಂಡಿತ.

ಸಂಸ್ಕೃತ ಭಾಷೆಯಂತು ಸಾಮಾನ್ಯ ಜನರಿಗೆ ಕಬ್ಬಿಣದ ಕಡಲೆ ಇದ್ದ ಹಾಗೆ. ಆದರೆ ದಾಸರ ಪದಗಳು, ಬಸವಣ್ಣ, ಅಕ್ಕಮಹಾದೇವಿ ಮೊದಲಾದವರ ವಚನಗಳು ಮತ್ತು ಸರ್ವಜ್ಞನ ತ್ರಿಪದಿಗಳು ಎಷ್ಟೊಂದು ಸರಳವಾಗಿ, ಸುಂದರವಾಗಿ ಮರ್ಮಕ್ಕೆ ನಾಟುವಂತಿದೆ. ವೇಧ, ಉಪನಿಷತ್ತು, ಪುರಾಣ

[13ನೇ ಪುಟ ನೋಡಿ]

# ಮಾನವ ಪ್ರಕೃತಿಯ ಮೊದಲ ಪಾಪ

'ಮನುಷ್ಯ'–ಹಾವು, ಹಲ್ಲಿ, ಚೇಳಿಗಿಂತ ವಿಷಭರಿತ ಪ್ರಾಣಿ! ಸಕಲ ಪ್ರಾಣಿಗಳನ್ನು ಸೃಷ್ಟಿಸಿ ಸುಸ್ತಾದ ಬ್ರಹ್ಮದೇವನು ವಾರಾಂತ್ಯದಲ್ಲಿ ಮನುಷ್ಯನನ್ನು ಸೃಷ್ಟಿಸಿದನೇ?! ಮಿಕ್ಕೆಲ್ಲಾ ಪ್ರಾಣಿಗಳನ್ನು ಆಳುವ ಶಕ್ತಿ ಸಾಮರ್ಥ್ಯವನ್ನು ದೇವರು ಮನುಷ್ಯನಿಗೆ ದಯಪಾಲಿಸಿದ್ದಾನೆ. ಕರ್ತನು ಮನುಷ್ಯನಿಗೆ ಬುದ್ಧಿ ಕೊಟ್ಟ, ಯೋಚಿಸುವ, ವಿಶ್ಲೇಷಣೆ ಮಾಡುವ ಜ್ಞಾನವನ್ನೂ ಕೊಟ್ಟ. ಮಾನವ ಅನಾದಿ ಕಾಲದಿಂದಲೂ ತನ್ನೆಲ್ಲಾ ಜ್ಞಾನವನ್ನು ತನ್ನ ನಾಶಕ್ಕೇ ಉಪಯೋಗಿಸುತ್ತಾ ಬಂದಿದ್ದಾನೆ. ತನ್ನ ಹೊಟ್ಟೆ ತುಂಬಿದ್ದರೂ ಕೂಡ 'ಇನ್ನೂ ಬೇಕು' ಎನ್ನುವ ದುರಾಸೆ ಮನುಷ್ಯ ಪ್ರಾಣಿಗೆ ಮಾತ್ರ. ಮನುಷ್ಯನನ್ನು ಸೃಷ್ಟಿಸಿ ದೇವರು ತಪ್ಪು ಮಾಡಿದ. ಮನುಷ್ಯನೊಬ್ಬನಿಲ್ಲದಿದ್ದರೆ ಈ

**ಎಡಿಕೇರಿ ಸುದರ್ಶನ್, ಬೆಂಗಳೂರು**

ಭೂಲೋಕ ಎಷ್ಟೋ ಸೊಗಸಾಗಿರುತ್ತಿತ್ತೇನೊ. ಈ ಸುಂದರ ನದಿ, ವನಗಳು, ಮೃಗಗಳು, ಜಾರುವ ಜಲಪಾತ ಇವೆಲ್ಲವನ್ನೂ ಆನಂದಿಸಲೆಂದು ಭಗವಂತ ಬುದ್ಧಿವಂತ ಮನುಷ್ಯನನ್ನು ಸೃಷ್ಟಿ ಮಾಡಿರಬಹುದು, ಆದರೆ "ಮನುಷ್ಯನ ಸೃಷ್ಟಿ ಪ್ರಕೃತಿಯ ಮೊದಲ ಪಾಪ".

ಹಿಂದೊಂದು ಕಾಲದಲ್ಲಿ ದೈವಾಂಶ ಸಂಭೂತನಾದ ಶ್ರೀರಾಮನು ತನ್ನ ರಾಜ್ಯಾಡಳಿತದಲ್ಲಿ ಜನರು ತೃಪ್ತಿಯಿಂದ ಜೀವನ ಸಾಗಿಸುತ್ತಿರುವರೋ? ಎಂದು ತಿಳಿದುಕೊಳ್ಳಬಯಸಿ, ಗೂಢಾಚಾರರನ್ನು ಬಿಟ್ಟ. ಆ ಗೂಢಾಚಾರರು ನಗರದಲ್ಲಿ ಸಂಚಾರ ಮಾಡುತ್ತಾ ಒಬ್ಬ ಅಗಸನ ಮನೆಯ ಬಳಿ ಬಂದಾಗ, ಆ ಅಗಸನು ತನ್ನ ಹೆಂಡತಿಯನ್ನು ಬಯ್ಯುತ್ತಿರುವುದು ಕೇಳಿಸಿತು. "ಪರಪುರುಷನ ಮನೆಯಲ್ಲಿ ವಾಸಮಾಡಿ ಬಂದವಳನ್ನು ಸ್ವೀಕರಿಸಲು ನಾನೇನು ಶ್ರೀರಾಮನೆಂದುಕೊಂಡೆಯಾ?" ಎಂದು ಅಗಸ ತನ್ನ ಹೆಂಡತಿಯನ್ನು ಜರೆದನಂತೆ. ಈ ವಿಷಯ ಶ್ರೀರಾಮನಿಗೆ ಗೊತ್ತಾಗಿ ಅವನು ಸೀತಾಮಾತೆಯನ್ನು ಅಗ್ನಿ ಪರೀಕ್ಷೆಗೆ ಗುರಿಮಾಡಿದ ಕತೆ ತಿಳಿದದ್ದೇ. ಮನುಷ್ಯನ ನೀಚ ನಾಲಿಗೆಯ ದೂಷಣೆಯಿಂದ ದೇವಾನುದೇವತೆಗಳೇ ವಿಚಲಿತರಾಗುವರೆಂದರೆ ಮಿಕ್ಕವರ ಪಾಡೇನು? ಆದ್ದರಿಂದ ನಾವು ಜನರ ಮಾತಿಗೆ, ಅಭಿಪ್ರಾಯಗಳಿಗೆ ಯಾವಾಗಲೂ ಬೆಲೆ ಕೊಡದಿರುವುದೇ ಉತ್ತಮ.

ಜನಾಭಿಪ್ರಾಯಕ್ಕೆ ವಿಚಾರಮಾಡದೆ ಪ್ರಾಮುಖ್ಯತೆ ಕೊಟ್ಟರೆ ನಾವು ಮೂರ್ಖರಾಗುತ್ತೇವೆ. ಆ ದೇವನಿಂದಲೂ ಮನುಷ್ಯಪ್ರಾಣಿಯನ್ನು ಸಂಪೂರ್ಣ ತೃಪ್ತಿಪಡಿಸಲು ಸಾಧ್ಯವಾಗಲಿಲ್ಲ. ಇದನ್ನು ಸಮರ್ಥಿಸಲು ಮತ್ತೊಂದು ಕತೆ ಇಲ್ಲಿದೆ.

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ. ತುಂಬಾ ಒಳ್ಳೆಯವನು. ಜನರ ಕಷ್ಟಗಳು ತನ್ನ ಕಷ್ಟವೆಂದು ಭಾವಿಸಿದವನು. ಅವನಲ್ಲಿ ಒಂದು ದೌರ್ಬಲ್ಯವಿತ್ತು ತನ್ನ ಪ್ರಜೆಗಳು ಯಾವಾಗಲೂ ತನ್ನನ್ನು ಹೊಗಳುತ್ತಿರಬೇಕು ಎಂಬ ಆಸೆ ಅವನಿಗೆ. ಅದಕ್ಕೋಸ್ಕರ ಅವನು ಏನನ್ನು ಬೇಕಾದರೂ ತ್ಯಾಗ ಮಾಡಬಲ್ಲ. ಒಂದು ಸಲ ರಾಜನ ಒಬ್ಬನೇ ಮಗನ ನಾಮಕರಣ ಸಂದರ್ಭ. ಸರಿ, ರಾಜನಿಗೆ ಜನರು ತನ್ನನ್ನು ಹೊಗಳುವಂತೆ ಮಾಡಲು ಒಂದು ಸುವರ್ಣಾವಕಾಶ. ರಾಜ ಕಾಲು ನಡಿಗೆಯಲ್ಲೇ ತನ್ನ ಪ್ರತಿಯೊಬ್ಬ ಪ್ರಜೆಯ ಮನೆ ಬಾಗಿಲಿಗೆ ಹೋಗಿ ಊಟದ ಆಹ್ವಾನವಿತ್ತ. ರಾಜನ ಆಹ್ವಾನಕ್ಕೆ ಮನ್ನಣೆಯಿತ್ತು ಊರಿಗೆ ಊರೇ ಅಂದು ಅರಮನೆಯಲ್ಲಿ ನೆರೆದಿತ್ತು. ರಾಜ ಖುದ್ದಾಗಿ ಪ್ರತಿಯೊಬ್ಬರನ್ನೂ ಬರಮಾಡಿಕೊಂಡನು. ವಿಶಾಲವಾದ ಮಂಟಪದಡಿಯಲ್ಲಿ ನಾನಾ ತರಹದ ಭಕ್ಷ್ಯ ಭೋಜನವೇರ್ಪಡಿಸಲಾಗಿತ್ತು. ಎಲ್ಲರೂ ತಮ್ಮ ಹೊಟ್ಟೆ ಬಿರಿಯ ತಿಂದು ತೇಗಿದರು. ಊಟವಾದನಂತರ ತುಪ್ಪದಲ್ಲೇ ಕೈ ತೊಳೆಯುವಂತೆ ಏರ್ಪಾಡು ಮಾಡಲಾಗಿತ್ತು. ಫಲ ತಾಂಬೂಲವನ್ನು ಸ್ವೀಕರಿಸಿದ ಸಹಸ್ರಾರು ಸಂಖ್ಯೆಯ ಜನಸ್ತೋಮ ರಾಜನನ್ನು ಹಾಡುತ್ತಾ ಹೊಗಳುತ್ತಾ ಮನೆಗೆ ತೆರಳಿದರು. ರಾಜನಿಗೆ ಖುಷಿಯೋ ಖುಷಿ. ಆದರೂ ಅವನಿಗೆ ತೃಪ್ತಿಯಾಗಲಿಲ್ಲ. ಆತ ತನ್ನ ಗೂಢಾಚಾರರನ್ನು ಕರೆಯಿಸಿದ. ನನ್ನ ಎದುರಿನಲ್ಲೇನೋ ಜನರು ನನ್ನನ್ನು ಹಾಡಿ ಹೊಗಳಿದ್ದಾರೆ. ನನ್ನ ಬೆನ್ನಹಿಂದೆ ಏನಾದರೂ ಬೇರೆ ಹೇಳಬಹುದೇ ತಿಳಿದು ಬನ್ನಿ ಎಂದು ಅವರನ್ನು ಬಿಟ್ಟ. ಸರಿ ಮಾರುವೇಷ ಧರಿಸಿದ ಗೂಢಾಚಾರಿಗಳು ಬೀದಿ ಬೀದಿಗಳಲ್ಲಿ ಅಲೆದರು. ಎಲ್ಲೆಡೆಯೂ ಅಂದಿನ ಭವ್ಯ ಭೋಜನದ ಗುಣಗಾನವೇ. ಗೂಢಾಚಾರಿಗಳು ತೃಪ್ತಿಯಿಂದ ಮರಳುತ್ತಿದ್ದಾಗ ಮಾರುಕಟ್ಟೆಯ ಬಳಿ ಗುಂಪು ನೆರೆದ ಜನರ ಮಧ್ಯೆಯಿಂದ ಒಬ್ಬ ಉದ್ಗಾರವೆಳೆದ- "ಅಲ್ಲಾ...ರಾಜ ಅಷ್ಟೆಲ್ಲಾ ಮಾಡಿದ. ತುಪ್ಪದಲ್ಲೇ ಎಲ್ಲರಿಗೂ ಕೈ ತೊಳೆಯಿಸಿದ... ಆದರೆ ಕೈ ಒರೆಸಿಕೊಳ್ಳಲು ಒಂದೊಂದು ಕರವಸ್ತ್ರವನ್ನೂ ಕೊಡಿಸಿದ್ದರೆ ಅವನ ಗಂಟೇನು ಹೋಗುತ್ತಿತ್ತೋ?"

[13ನೇ ಪುಟ ನೋಡಿ]

# ಗೌಡರ ವಿವಾಹ ಪದ್ಧತಿಯ ಸೋಭಾನೆಗಳು

[ಹಿಂದಿನ ಸಂಚಿಕೆಯಿಂದ]

**13) ಅ. ಬಾಗಿಲು ತಡೆಯುವ ಹಾಡು :**

ಹಯವಾರಣಂಗಳು ಮೆರೆವ ದಾಸಿಯರುಗಳ ಗಡಣದಿ ಪರಮದ್ರವ್ಯಗಳೆಂಟು ಕಿವಿ ಕೊಪ್ಪುರಿಗೆ ಸಹ ಹಿರಿಯಣ್ಣ ಕೊಡುವನು । ಹರುಷದಿಂದಲಿ ಮನ್ಮನೋರಥ ದಯಮಾಡಣ್ಣಯ್ಯ ಶ್ರೀ ಕೃಷ್ಣಯ್ಯಾ ॥ ೧೦ ॥ ಏನ ಹೇಳಿದರು ಸಮ್ಮತವಿಲ್ಲಾ ನಿನಗೆ ಮತ್ತೇನುಂಟು ಮನಸಿನೊಳು ನಿನ್ನಯ ಗುಟ್ಟನ್ನಾಣೆ ಹೇಳಲೆಮ್ಮೊಳು । ನಿನಗೆ ಅನುಮಾನವಿಲ್ಲದೆ ಎನ್ನೊಳು ಈ ಸಭೆಯೊಳು ಸಾನುರಾಗದಿ ನೀನು ಬೇಡಿಕೊ ಮಾನಿನೀಯರ ಕುಲ ಶಿರೋಮಣಿ । ಜಾಣೆ ಮನ್ಮಥನಾಣೆ ಸರಸ ಪ್ರವೀಣೆ ಗಣ ನಿಧಾನೆ ಬೇಗದಿ ಕದ ಬಿಡೆ ತಂಗೀ ಮೋಹನಾಂಗೀ ॥ ೧೧ ॥ ಕಡಲಶಯನ ನಿನ್ನ ಮಗಳೆನ್ನ ಮಗನಿಗೆ ಕೊಡಬೇಕೆಂದೆನುತ ನಾನು ಈ ಸಮಯದಿ ತಡೆದಿಹೆ ಬಾಗಿಲನು । ವೀಳ್ಯವನಿತ್ತು ಕೊಡಿಸೆನಗಭಯವನು ನಿನ್ನಾತ್ಮಜೆಯನು ಕೊಡುವೆನ್ನಯ ಕುವರಗೆನುತಲಿ ದೃಢದಿ ಭಾಷೆಯ ನಿತ್ತರೀಕ್ಷಣ ಬಿಡುವೆ ನಾ ತಡೆದಿಹ ಕವಾಟವ । ತಡೆಯ ದೀಕ್ಷಣ ದಾನವಾಂತಕ ದಯಮಾಡಣ್ಣಯ್ಯಾ ಶ್ರೀ ಕೃಷ್ಣಯ್ಯಾ ॥ ೧೨ ॥ ನಂದನಂದನ ಚೆಲ್ವ ಕಂದನ ವದನೆಪೂರ್ಣ ಚಂದಿರ ಮುಖಿಯೆ ಕೇಳು । ನಾ ಬಯಸುವ ಕಂದನಿಗೆ ಮೊದಲು ಚೊಚ್ಚಲು ಮಗಳೆಂದು ನೀ ವರದೆನ್ನೆಳು । ಈ ಸಭೆಯೊಳು ಹಿಂದೆ ಮಾಡಿದ ಸುಕೃತವಂತಿಹುದೆಂದು ಕಂಡವರಾರು ಲೋಕದಿ । ಕಂದ ಮೊದಲೆನಗಾದರಪಕೀ। ನೆಂದು ವರ್ಣಿಸು ಕಂಬುಕಂಠಿಣಿ ॥ ಕದಬಿಡೆ ತಂಗೀ ಮೋಹನಾಂಗೀ ॥ ೧೩ ॥ ಗಂಡುಮಗ ನುದಿಸಿದರೆ ಮಾಂಡಲಿಕರ ಗಂಡಾಗಿ ತೇಜದಲಿ ಆಳಿರಲಿ ಭೂಮಂಡಲ ಸೌಖ್ಯದಲಿ ಕೀರ್ತಿಯನೊಡಗೊಂಡು ವಿನೋಧದಲಿ ಹೆಣ್ಣಾದರೆನ್ನ ಚಂಡ ವಿಕ್ರಮ ಕುವರಗೆನುತಲಿ ಪುಂಡರೀಕ ದಳನಯನ ಜಗದುದ್ದಂಡ ಮೂರು ಈಶ ಸಖಿಮಾರ್ತಾಂಡ ಶತಕೋಟಿ ಪ್ರಕಾಶನೇ ದಯಮಾಡಣ್ಣಯ್ಯಾ ಶ್ರೀಕೃಷ್ಣಯ್ಯಾ ॥ ೧೪ ॥ ಮತ್ತೊಂದು ಮಾತುಂಟು, ನೀ ಕೇಳು ಸೌಭದ್ರೆ ಅತ್ತಿಗೆಯೊಡನೆ ನೀನು । ನಾಳೆಗೆ ಬದಲುತ್ತರ ಬರುವುದನು ಈ ಹೊತ್ತೆ ನಿವೃತ್ತಿಯ ಮಾಡದನು ಜನರಿದಿರೊಳೆನ್ನು । ಮತ್ತೆ ನೀ ನುಡಿದಂತೆ ಭಾಷೆಗೆ ವೀಳ್ಯವನಿತ್ತು ಕೊಡಿಸುವೆ ಮತ್ತ ಕಾಶಿನಿ ಮಂದಗಾಮಿನಿ । ವೃತ್ತ ಕುಂಜಿ ನೀನೀಗ ದಯವಿಡೆ ಕದಬಿಡೆ ತಂಗೀ ಮೋಹನಾಂಗೀ ॥ ೧೫ ॥ ಜಾಣೆಯರರಸಿ ಎನ್ನಣ್ಣನ ಪಟ್ಟದರಾಣಿ ಕಲಾಪಿ ವೇಣಿ । ಸುಲಲಿತ ಗುಣಶ್ರೇಣಿ ಪರಮ ಕಲ್ಯಾಣಿ । ಸ್ತ್ರೀಯರೊಳು ಕಲ್ಯಾಣಿ ಕಲಕೀರವಾಣಿ । ಶತಪತ್ರ ಪಾಣಿ । ಮೀನ ...ನ ಪಿ-ಗೆ ಕಳುಹಿಸಿ ತಾನು ಲೇಖನ ಬರೆದು ಅಣ್ಣನ ಮಾನ ಭ... ಓಡಿ ಬಂದ ಪ್ರವೀಣೆ ಗುಣನಿಧಾನೆ ಬೇಗದಿ ಬಿಡೆ ನಿನ್ನ ...ಗಳ ಕೊಡಬೇಕು ॥ ೧೬ ॥ ಸಾರಸೋಪಮಪಾಣೆ ಕಲಕೀರಭ ಷಿಣಿ ನಾರ-ಹಿ ಸಮಗಂಭೀರೆ ಮಾತಿನೊಳತಿ ಶೂರೆ ನಿನಗೆ ಭಾಪುರೆ । ಎನಗಿಷ್ಟುಪಚಾರ ಮಾಡಿದಿಯೆ ನೀರೆ ಸರಸ ಶೃ...ಾರೆ । ಚಾರುತನದಿ ಸನ್ಯಾಸಿ ವೇಷದಿ ಚೋರ ತನದಲಿ ಸೇರಿದವನೊಳು ಧೀರ ಹಿರಿಯಣ್ಣನಿಗೆ ವಂದಿಸಿ ಜಾರಿ ಬಂದ ಮಹಾನುಭಾವಳಿ ಕರೆತಾರೆ ನಿನ್ನ ಕುವರನ್ನ ॥ ೧೭ ॥ ನೂತನ ಗಾರ್ತಿ ಕೇಳ್ ಮಾತಿಗೆ ಮಾತುಂಟು ಯಾತಕೀ ಮಾತುಗಳು ತೋರಿಕೆ ಜಗನ್ಮಾತೆ ನಿನ್ನಯ ಮಗಳು । ನಲಿನಲಿದೆನ್ನನು ಜಾತನು ಎದುರಿನೊಳು ಬರುವ ನೀ ಕೇಳು ಮಾತು ನಿಶ್ಚಯವೆಂದು ಅತಿ ಸಂಪ್ರೀತಿಯಲಿ ವೀಳ್ಯವನು ಭೀಷ್ಮಕ । ಜಾತೆ ಮೂಜಗ ಮಾತೆ ಸರಸ ವಿಖ್ಯಾತ ಅಣ್ಣನ ಪ್ರೀತಿ ರುಕ್ಮಿಣಿ ಬೆಡೆ ನಿನ್ನ ಮಗಳ ಕೊಡಬೇಕು ॥ ೧೮ ॥ ಮಂದಹಾಸದೊತರವಿಂದ ಲೋಚನೆಯರಿಗೆಂದು ಮಾತಿಗೆ ಮಾತನ್ನು ಆಡುತ ನಗುಗೆಂದು ಚಿನ್ಮಯರೂಪನು । ಒಡಂಬಡಿಸ್ಯಾ ನಂದದೊಳರಸಿಯನು ಸೌಭದ್ರೆಯನು ಎಂದು ವಿನಯೋಕ್ತಿಯನು ಪೇಳುತ । ಇಂದುಮುಖಿಯೆ ಕೇಳು ನಿನ್ನಯ ಕಂದಗೆನ್ನಯ ಕುವರಿ ಕೊಡುವೆನು ವೀಳ್ಯವನೀಯುಲಾಕ್ಷಣ ಬಾಲೆ ಸಾರಿದಳು ಸಭೆಯೊಳು ॥ ೧೯ ॥ ಪುರೋಹಿತರಿಗೆ ಸಾಕ್ಷಿಯನಿಟ್ಟು ಮುತ್ತಿನ ದ್ವಾರ ಬಿಟ್ಟಳು ನಗುತ । ಹರುಷದಿ ತನ್ನ ನಾರಿ ರುಕ್ಮಿಣಿ ಸಹಿತ ಮನಸಿಜನ ಪಿತ ಭೂಷಣ ಭೀಷ್ಮಕನವರಸುಕುಮಾರಿ ಸಹ ಒಪ್ಪಿರಲು ಹಸನ್ಮುಖಲಿ । ಚಾರುಕರುಣಾಕರನ ಮುಕುಟದಿ ಭೂರಿ ಸಂತೈಸಿದ... ಗಗನದಿ ನಾರಿಯರು ಸೇಸೆ ತಳಿದರು ಸೋಬಾನೆ ॥ ೨೦ ॥ ...ಂಗಳಂ ಯದುಕುಲತಿಲಕ ಗೋಪಾಲಗೆ ಮಂಗಳಂ ಮಾದ... ಮತ್ಸ್ಯಗೆ ಜಯಮಂಗಳಂ ಕೂರ್ಮನಿಗೆ ವರಾಹಗೆ ಶುಭ ...ಮಂಗಳಂ ನರಸಿಂಹಗೆ । ವಾಮನವತಾರೆಗೆ ಮಂಗಳಂ । ಶ್ರೀ ಪರಶುರಾಮಗೆ ಮಂಗಳಂ ಶ್ರೀರಾಮ ಕೃಷ್ಣಗೆ ಮಂಗಳಂ । ಶ್ರೀ ಬೌದ್ಧಕಲ್ಕಗೆ । ಮಂಗಳಂ । ಶ್ರೀ ಕೃಷ್ಣರಾಯಗೆ ಮಂಗಳಾರತಿ... ಬೆಳಗಿರೆ ॥ ಸೋಬಾನೆ ॥ ೨೧ ॥

[ಮುಂದುವರಿದಿದೆ]

---

## ಸೂಕ್ತಿ

ಕಿರೀಟದಲ್ಲಿ ಗಾಜನ್ನೂ, ಕಾಲಿನ ಒಡವೆಯಲ್ಲಿ ರತ್ನವನ್ನೂ ಇಟ್ಟರೆ ಅದು ಮಣಿಯ ತಪ್ಪಲ್ಲ, ದೋಷವೆಲ್ಲ ಅವಿವೇಕದ್ದೇ.

# ಆರೋಗ್ಯ ಚಿಂತನ:

## ಋತು ಸ್ರಾವ (ಮುಟ್ಟು)

**ಮುಟ್ಟು** ಹೆಂಗಸರ ಜೀವನದ ಅವಧಿಯಲ್ಲಿ ಒಮ್ಮೆ ಕಾಣಿಸಿಕೊಂಡು ಮತ್ತೆ ಮರೆಯಾಗುವ ದೇಹದ ಸಹಜ ಕ್ರಿಯೆಯಾಗಿದೆ.

ಹುಡುಗಿಯರು ಸುಮಾರಿಗೆ 11 ರಿಂದ 16 ವರ್ಷ ವಯಸ್ಸಿನೊಳಗೆ ಮೊದಲ ಬಾರಿ ಮುಟ್ಟಾಗುತ್ತಾರೆ. ಇದರೊಂದಿಗೆ ತಾರುಣ್ಯಾವಸ್ಥೆಯ ಹೆಜ್ಜೆಯಿಡುತ್ತಾರೆ. ಈ ಸಂದರ್ಭದಲ್ಲಿ ಹುಡುಗಿಯ ದೈಹಿಕ ಬೆಳವಣಿಗೆಯಲ್ಲಿ, ಭಾವನೆ, ಯೋಚನೆಗಳಲ್ಲಿ ಅಗಾಧ ಬದಲಾವಣೆಗಳಾಗುತ್ತವೆ. ಹೆಣ್ಣಿಗೆ ಸಹಜವಾದ ನಾಚಿಕೆ, ಲಜ್ಜೆ ಅವಳನ್ನಾವರಿಸುತ್ತದೆ. ಮೊದಲಿನ ಮಕ್ಕಳಾಟಿಕೆಯನ್ನು ಬಿಟ್ಟು ಆಗ ಅವಳು ಗಂಭೀರವಾಗುತ್ತಾಳೆ.

ಪಿಟ್ಯುಟರಿ ಗ್ರಂಥಿಯ ರಸಧೂತ [ಹಾರ್ಮೋನು]ಗಳ ಪ್ರಚೋದನೆಯಿಂದಾಗಿ ತರುಣಿಯ ದೇಹದ ಅಂಡಾಶಯ [ovary], ಗರ್ಭಕೋಶ [uterus] ಗಳಲ್ಲಿ ಆಗುವ ಬದಲಾವಣೆಗಳೇ ಮುಟ್ಟಿಗೆ ಕಾರಣ.

ಡಾ|| ಎನ್. ಎಸ್. ಪ್ರವೀಣ ಎಂ. ಡಿ., ಕೇರಳ

ಮುಟ್ಟು ಪ್ರತಿ 28 ರಿಂದ 30 ದಿನಗಳಿಗೊಮ್ಮೆ ಆಗುತ್ತದೆ. 3 ರಿಂದ 6 ದಿನಗಳವರೆಗೆ ರಕ್ತಸ್ರಾವ ಆಗಬಹುದು. ಸಾಮಾನ್ಯವಾಗಿ ಋತುಸ್ರಾವದ ವೇಳೆ ಒಟ್ಟು 30-50 ಸಿ.ಸಿ ಯಷ್ಟು ರಕ್ತಸ್ರಾವ ಹೋಗಬಹುದು.

ಕೆಲವರಲ್ಲಿ ಮುಟ್ಟು 12 ವರ್ಷಕ್ಕಿಂತ ಮುಂಚೆ, ಇನ್ನು ಕೆಲವರಲ್ಲಿ ಮುಟ್ಟಾಗಲು 16, 17 ವರ್ಷವಾಗಬಹುದು. ಆದರೂ ಮುಟ್ಟು 8 ವರ್ಷಕ್ಕಿಂತ ಮೊದಲು ಆದಲ್ಲಿ ಅಥವಾ 18 ವರ್ಷವಾದರೂ ಮುಟ್ಟಾಗದಿದ್ದಲ್ಲಿ ವೈದ್ಯರ ಸಲಹೆ ಅತ್ಯಗತ್ಯ.

ಆರಂಭದಲ್ಲಿ ಮುಟ್ಟು ಅನಿಯಮಿತವಾಗಿರಬಹುದು. ಕೆಲವು ದಿನ ಹಿಂದೆ ಅಥವಾ ಮುಂದೆ ಆಗಬಹುದು. ರಕ್ತಸ್ರಾವ ಸ್ವಲ್ಪ ಜಾಸ್ತಿಯಾಗಬಹುದು. ಈ ರೀತಿಯ ಅನಿಯಮಿತ ಮುಟ್ಟಾಗುವಿಕೆ [ಒಂದೂವರೆ ಅಥವಾ ಎರಡು ತಿಂಗಳಿಗೊಮ್ಮೆ] ಮುಂದುವರಿದಲ್ಲಿ, ರಕ್ತಸ್ರಾವವೂ ಅಧಿಕವಾಗಿದ್ದಲ್ಲಿ ಹುಡುಗಿಯರಿಗೆ ಹಾರ್ಮೋನು [ಈಸ್ಟ್ರೋಜನ್ ಹಾಗೂ ಪ್ರೊಜೆಸ್ಟರಾನ್ Estrogrn & Progesterone] ಮಾತ್ರೆಗಳನ್ನು 3 ರಿಂದ 6 ತಿಂಗಳವರೆಗೆ ನೀಡಿ ಮುಟ್ಟನ್ನು ನಿಯಮಿತವಾಗಿ ತಿಂಗಳಿಗೊಮ್ಮೆ ಬರುವ ಹಾಗೆ ಮಾಡಬೇಕಾಗಬಹುದು.

ಮುಟ್ಟಾಗುವ ಸಮಯದಲ್ಲಿ ಕೆಲವರಿಗೆ ಹೊಟ್ಟೆನೋವು, ಬೆನ್ನು ನೋವು, ವಾಂತಿ, ಆಯಾಸ ಆಗಬಹುದು. ಇದಕ್ಕೆ ಜಾಸ್ತಿ ಗಾಬರಿ ಬೇಕಾಗಿಲ್ಲ.

ಸುಮಾರು 45 ರಿಂದ 50 ವರ್ಷ ವಯಸ್ಸಾಗುವಾಗ ಮುಟ್ಟು ನಿಲ್ಲುತ್ತದೆ. ಮುಟ್ಟು ನಿಲ್ಲುವ ಮೊದಲು ಕೆಲ ತಿಂಗಳು ಮುಟ್ಟು ಅನಿಯಮಿತ ಆಗಬಹುದು. ಆದರೆ ಈ ಸಂದರ್ಭದಲ್ಲಿ ಜಾಸ್ತಿ ರಕ್ತಸ್ರಾವವಾಗುತ್ತಿದ್ದಲ್ಲಿ ಸ್ತ್ರೀರೋಗ ತಜ್ಞರ ಸಲಹೆ ಪಡೆಯಬೇಕಾದುದು ಅತ್ಯಗತ್ಯ. ಮುಟ್ಟು ನಿಲ್ಲುವ ಸಮಯದಲ್ಲಿ ಹಾಗೂ ಅದಕ್ಕಿಂತ ಮುಂಚೆ [ಸುಮಾರು 40 ವರ್ಷದ ನಂತರ] ಮಹಿಳೆಗೆ ಜಾಸ್ತಿ ಸಿಟ್ಟು, ಆತಂಕ, ಮೈಯೆಲ್ಲಾ ಬಿಸಿಯಾದ ಅನುಭವ ಆಗಬಹುದು. ನಂತರ ಸೊಂಟನೋವು, ಮೂಳೆನೋವು ಕಾಣಿಸಿಕೊಳ್ಳಬಹ ದು. ಈ ಸಂದರ್ಭದಲ್ಲಿ ಮಾನಸಿಕ ಧೈರ್ಯ ಅಗತ್ಯ. ಈ ತೊಂದರೆಗಳು ತೀವ್ರವಾಗಿದ್ದಲ್ಲಿ ಈಸ್ಟ್ರೋಜನ್ [Estrogen] ಗುಳಿಗೆಗಳನ್ನು ವೈದ್ಯರ ಸಲಹೆಯಂತೆ ತೆಗೆದುಕೊಳ್ಳಬೇಕಾಗಬಹುದು. ಹಾಗೆಯೇ ತೊಂದರೆಗಳು ಕಾಣಿಸಿಕೊಳ್ಳುವ ಮೊದಲೇ ಮುನ್ನೆಚ್ಚರಿಕೆಯ ಕ್ರಮವಾಗಿ ಹಾರ್ಮೋನ್ ಮಾತ್ರೆಗಳನ್ನು ಬಹಳ ವರ್ಷದವರೆಗೆ ಸೇವಿಸಬೇಕಾಗಬಹುದು. ಯಾವುದೇ ಕಾರಣಕ್ಕೂ ಈ ಮಾತ್ರೆಗಳನ್ನು ತಜ್ಞವೈದ್ಯರ ಸಲಹೆಯಿಲ್ಲದೆ ತೆಗೆದುಕೊಳ್ಳಬಾರದು. ಸರಿಯಾದ ಕ್ರಮದಲ್ಲಿ ಈ ಮಾತ್ರೆಗಳನ್ನು ಸೇವಿಸಲಿಲ್ಲದಿದ್ದಲ್ಲಿ ಅಥವಾ ಅಧಿಕ ಡೋಸ್ ಇರುವ ಈಸ್ಟ್ರೋಜನ್ ಮಾತ್ರೆ ಬಹಳ ಸಮಯದವರೆಗೆ ಸೇವಿಸಿದ್ದಲ್ಲಿ, ಗರ್ಭಕೋಶದ ಕ್ಯಾನ್ಸರ್‌ನಂತಹ ಭೀಕರ ಸಮಸ್ಯೆಗಳಿಗೂ ಕಾರಣವಾಗಬಹುದು. ಮುಟ್ಟು ನಿಂತ ನಂತರ ಮೂಳೆ ಸವೆತವಾಗಬಹುದಾದ್ದರಿಂದ ಅಧಿಕ ಕ್ಯಾಲ್ಸಿಯಂ ಇರುವ ಆಹಾರ ಅಥವಾ ಕಾಲ್ಸಿಯಂ ಮಾತ್ರೆಗಳನ್ನು ಸೇವಿಸಬೇಕು.

ಮುಟ್ಟಿಗೆ ಸಂಬಂಧಿಸಿದಂತೆ ಇಂದು ಹಲವಾರು ಮೂಢ ನಂಬಿಕೆಗಳು ಜನರಲ್ಲಿ ಬೇರೂರಿದೆ. ಮುಟ್ಟಾಯಿತೆಂದರೆ ಮೈಲಿಗೆಯಾಯಿತೆಂದು ಮನೆಯಿಂದ ಹೊರಗೆ ಇರಲು ಹೇಳುವುದು ಮೂಢನಂಬಿಕೆಯ ಪರಮಾವಧಿ! ಇದು ದೇಹದ ಒಂದು ಸಹಜ ಕ್ರಿಯೆ ಎಂಬುದನ್ನು ಎಲ್ಲರೂ ಅರಿಯಬೇಕು. ಹಾಗೆಯೇ ಮಹಿಳೆಗೆ ಮುಟ್ಟಾಗುತ್ತದೆಂದಲ್ಲಿ ಶುಭ ಸಮಾರಂಭಗಳನ್ನು ಮುಂದಕ್ಕ ಹಾಕುವುದುಂಟು. ಆ ಸಂದರ್ಭದಲ್ಲಿ ಮುಟ್ಟಾಗುವಿಕೆಯನ್ನು ತಡೆಯಲೇಬೇಕೆಂದಲ್ಲಿ ವೈದ್ಯರ ಸಲಹೆಯಂತೆ ಕೆಲವು ಮಾತ್ರೆಗಳನ್ನು ಸೇವಿಸುವುದರಿಂದ ಮುಟ್ಟನ್ನು 4-5 ದಿನಸ ಮುಂದಕ್ಕೆ ತಳ್ಳಬಹುದು.

[12ನೇ ಪುಟ ನೋಡಿ]

ಮುಟ್ಟಿನ ಸಮಯದಲ್ಲಿ ಉಂಟಾಗುವ ನೋವಿಗೆ ಗಾಬರಿಯಿಂದ ಕೆಲವರು ಹೊದ್ದು ಮಲಗುವುದುಂಟು. ಈ ನೋವು ಸಾಮಾನ್ಯ ಹಾಗೂ ಯಾವುದೇ ರೀತಿಯ ಭಯ ಅನಗತ್ಯ ಮಾನಸಿಕ ಧೈರ್ಯವೇ ಇದಕ್ಕೆ ಸರಿಯಾದ ಚಿಕಿತ್ಸೆ. ನೋವು ಅತಿಯಾಗಿದ್ದಲ್ಲಿ ನೋವಿನ ಶಮನಕ್ಕಾಗಿ ಆ ಸಮಯದಲ್ಲಿ ಮಾತ್ರೆಗಳನ್ನು ತೆಗೆದುಕೊಳ್ಳಬಹುದು. ಈ ಸಂದರ್ಭದಲ್ಲಿ ಹೆಣ್ಣು ಮಾಮೂಲಿನಂತೆ ಕೆಲಸ ಮಾಡಿಕೊಂಡಿರಬಹುದು. ಎಲ್ಲಾ ಆಹಾರ ಪದಾರ್ಥಗಳನ್ನು ತಿನ್ನಬಹುದು.

ಈ ವೇಳೆಯಲ್ಲಿ ಲೈಂಗಿಕ ಸಂಪರ್ಕ ಹೊಂದುವುದರಿಂದಲೂ ಯಾವುದೇ ಅಪಾಯವಿಲ್ಲ.

ಮುಖ್ಯವಾಗಿ ಹೆಂಗಸರು ಮುಟ್ಟಿಗೆ ಸಂಬಂಧಿಸಿದ ತೊಂದರೆಗಳಿದ್ದಲ್ಲಿ ಹೇಳಿಕೊಳ್ಳಲು ನಾಚುತ್ತಾರೆ. ಹಲವಾರು ಸಮಯದವರೆಗೆ ವಿಷಯವನ್ನು ಮುಚ್ಚಿಟ್ಟು ರೋಗ ಉಲ್ಬಣಾವಸ್ಥೆಗೆ ಬಂದಾಗಲೇ ವೈದ್ಯರ ಬಳಿ ಬರುತ್ತಾರೆ. ಇದು ಸಲ್ಲದು. ಈ ವಿಷಯದಲ್ಲಿ ಯಾವುದೇ ತೊಂದರೆ, ಅನುಮಾನ ಇದ್ದಲ್ಲಿ ಪ್ರಾರಂಭಾವಸ್ಥೆಯಲ್ಲೇ ವೈದ್ಯರನ್ನು ಕಂಡು ಅವರಿಗೆ ಪೂರ್ಣ ಮಾಹಿತಿ ನೀಡಿ ಅವರ ಸಲಹೆಯಂತೆ ನಡೆಯಬೇಕು.

ಅನಿಯಮಿತ ಮುಟ್ಟಾಗುತ್ತಿದ್ದಲ್ಲಿ ವಿಪರೀತ ರಕ್ತಸ್ರಾವವಾಗುತ್ತಿದ್ದಲ್ಲಿ, ಮುಟ್ಟು ಅಲ್ಲದ ಸಮಯದಲ್ಲಿ ರಕ್ತ ಹೋಗುತ್ತಿದ್ದಲ್ಲಿ, ಮುಟ್ಟಿನ ಸಮಯದಲ್ಲಿ ತಡೆಯಲಾರದಷ್ಟು ನೋವಿದ್ದಲ್ಲಿ, ಆಗಬೇಕಾದ ಮುಟ್ಟು ನಿರೀಕ್ಷಿತ ಅವಧಿಯಲ್ಲಿ ಆಗದಿದ್ದಲ್ಲಿ ಅಥವಾ ನಿರೀಕ್ಷಿತ ಅವಧಿಗಿಂತ ಮೊದಲೇ ಆಗುತ್ತಿದ್ದಲ್ಲಿ, ಸ್ತ್ರೀರೋಗ ತಜ್ಞ ವೈದ್ಯರ ಸಲಹೆ ಪಡೆಯುವುದು ಅತ್ಯಗತ್ಯ.

## ಕನಸಿನ ಬದುಕು

ಸುಮಾರು 50 ವರ್ಷಗಳ ಹಿಂದೆ ಹಣದ ಬೆಳೆಗಳ್ಯಾವೂ ಪ್ರಾಬಲ್ಯತೆಯನ್ನು ಪಡೆದುಕೊಂಡಿರದ ಕಾಲ ಆಹಾರ ಬೆಳೆಗಳು ಆ ಕಾಲದಲ್ಲಿ ಹೆಚ್ಚು ಪ್ರಾಬಲ್ಯತೆ ಪಡೆದುಕೊಂಡಿದ್ದವು ಹೆಚ್ಚು ಗದ್ದೆಗಳಿರುವವನೇ ಆ ಕಾಲದಲ್ಲಿ ಶ್ರೀಮಂತ ಆ ಕಾಲದಲ್ಲಿ ಒಬ್ಬ ರೈತನಿದ್ದ. ತನ್ನ ತಂದೆಯನ್ನು ಕಳೆದುಕೊಂಡ ಆತನಿಗೆ ಅಣ್ಣಂದಿರಿದ್ದರೂ ನೌಕರಿಯಲ್ಲಿ ಹೊರ ಊರಿನಲ್ಲಿ ನೆಲೆಸಿದ್ದರು. ತನ್ನ ತಮ್ಮಂದಿರನ್ನು, ತಾಯಿಯನ್ನು ಸಾಕುವ ಹೊಣೆ ಆತನ ಹೆಗಲಿಗೇ ಬಿತ್ತು. ಬೆಳೆದ ಧಾನ್ಯ ಹೊಟ್ಟೆ ಹೊರೆಯಲೇನೋ ಸಾಕಾಗುತ್ತಿತ್ತು. ಆದರೆ ಆರ್ಥಿಕ ಮುಗ್ಗಟ್ಟಿದ್ದುದರಿಂದ ಧಾನ್ಯ ಮಾರಿ ಆರ್ಥಿಕವಾಗಿ ಮುಂದುವರಿಯಬೇಕಾಗಿತ್ತು. ದಿನ ನಿತ್ಯ ಶ್ರಮ ವಹಿಸಿ ದುಡಿಯತೊಡಗಿದ. ದುಡಿದ ಆಯಾಸದ ಪರಿಹಾರದ ಸುಖಕ್ಕಾಗಿ ಮದ್ಯಕ್ಕೆ ಶರಣುಹೋದ. ಕೆಲವು ವರ್ಷಗಳಲ್ಲಿ ತನ್ನ ದುಡಿತಕ್ಕೆ ಫಲ ಸಿಕ್ಕಿತು. ತಮ್ಮಂದಿರು ದುಡಿಯುವಂತಾದರೂ ಹಣ, ಗೌರವ, ಅಂತಸ್ತುಗಳೆಲ್ಲಾ ಫಲಿಸಿತು. ಊರಿನ ಮುಖ್ಯ ವ್ಯಕ್ತಿಯಾದ.

ಹಿಂದೆ ಕಷ್ಟ ಹಾಗೂ ತನ್ನ ಬಡತನವನ್ನು ಮರೆಯಲೆಂದು ಸೇವಿಸುತ್ತಿದ್ದ ಮದ್ಯದ ಚಟ ಹಾಗೆಯೇ ಮುಂದುವರಿಯತೊಡಗಿತು. ತನ್ನ ದೇಹವನ್ನು ಅನಾರೋಗ್ಯದ ಕಡೆ ತಳ್ಳಿತು.

ಇಂದು ಆತನ ದೇಹ ಒಣಗಿದ ತರಗೆಲೆಯಂತಾಗಿ ಹಾಸಿಗೆಗೆ ಅಂಟಿಕೊಂಡಿದೆ. ಜೀವವಿದೆಯೇ ಹೊರತು ದೇಹ ನಿಶ್ಚಲವಾಗಿದೆ. ಈಗ ಮದ್ಯಪಾನ ತ್ಯಜಿಸಿದರೂ ಹದಗೆಟ್ಟ ತನ್ನ ದೇಹದ ಭಾಗಗಳಾವುವು ಮೊದಲಿನಂತಾಗಲಾರವು. ಹಾಸಿಗೆಗೆ ಅಂಟಿದ ಆ ದೇಹದಲ್ಲಿ ಕಣ್ಣುಗಳೆರಡು ಮಾತ್ರ ಪಿಳಿ ಪಿಳಿ ಎನ್ನುತ್ತಿವೆ. ಗಂಟಲಿನಿಂದ ಹೊರಡುವ ಶಬ್ಧ ತರಂಗಗಳು ಇನ್ನೊಬ್ಬರಿಗೆ ಕೇಳಿಸದಷ್ಟು ನಿಶಕ್ತಿ ಹೊಂದಿವೆ. ತನ್ನ ಜೀವನದಲ್ಲಿ ಮಾಡಬೇಕಾಗಿದ್ದಂತಹ ಕೆಲವು ಮಹತ್ಕಾರ್ಯಗಳನ್ನು ಮಾಡಲಾಗದಿದ್ದರೂ ನೋಡಲಾಗುವುದೋ ಇಲ್ಲವೋ ಎಂಬ ಸಾವು ಬದುಕಿನ ನಡುವಿನ ಸಂಧ್ಯಾಕಾಲದಲ್ಲಿದೆ ಆ ವ್ಯಕ್ತಿಯ ಜೀವ. ಆ ವ್ಯಕ್ತಿ ತನ್ನ ಜೀವನದ ಕಾಲವನ್ನು ಹಿಂತಿರುಗಿ ನೋಡಿದರೆ ಒಂದೆರಡು ಗಂಟೆಯ ಸಿನೆಮಾ ನೋಡಿದಂತೆ ಅಥವಾ ರಾತ್ರಿ ಕಂಡ ಕನಸಿನಂತಾಗಬಹುದು. ಈ ಮಾತು 'ಸಾವಿನಂಚಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸಬಹುದು.'

ನಾವು ಬುದ್ಧಿ ಜೀವಿಗಳು. 21ನೇ ಶತಮಾನಕ್ಕೆ ಕಾಲಿರಿಸಲಿದ್ದೇವೆ. ನಾವು ದುಶ್ಚಟವನ್ನು ದೂರವಾಗಿರಿಸಿದರೆ ದೈಹಿಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ನೆಮ್ಮದಿಯಿಂದ ಬದುಕಬಹುದು. ಆಗ ಆ ಸೃಷ್ಟಿಕರ್ತನ ಮೊಗದಲ್ಲಿ ನಗು ಚೆಲ್ಲಬಹುದು. ನನ್ನ ಈ ಬರಹ ಮಾದಕ ವ್ಯಸನಿಗಳಿಗೆ, ಯುವ ಪೀಳಿಗೆಗೆ ಒಂದು ಮಾರ್ಗದರ್ಶನದ ಮೈಲುಗಲ್ಲಾಗಲೆಂದು ಆಶಿಸುತ್ತೇವೆ. ●

—ಕುಂಭಗೌಡನ ವಿ. ಪ್ರಸನ್ನ, ಮಕ್ಕಂದೂರು.

## ಸೂಕ್ತಿ

ಸ್ವಾರ್ಥವನ್ನು ಗೆದ್ದವನು, ಶಾಂತಿಯನ್ನು ಪಡೆದವನು ಮತ್ತು ಸತ್ಯವನ್ನು ಬಲ್ಲವನೇ ನಿಜವಾದ ಸುಖಿ.

—ಗೌತಮ ಬುದ್ಧ.

[8ನೇ ಪುಟದಿಂದ]

ಗಳ ಸಾರ ಸಂಗ್ರಹವೇ ಈ ಸರಳ ಶೈಲಿಯ ಪದಗಳಲ್ಲಿ ತುಂಬಿದೆ. ಜ್ಞಾನ ಸಾಗರವೇ ಇವುಗಳಲ್ಲಿದೆ. ಬಹಳ ಸುಲಭವಾಗಿ ಜನ ಸಾಮಾನ್ಯರೂ ಅರ್ಥ ಮಾಡಿಕೊಳ್ಳಬಹುದು.

ಮಾನವನ ಮನಸ್ಸೆಂಬುದೊಂದು ದೊಡ್ಡ ಮರವಿದ್ದಂತೆ. ಅಲ್ಲಿ ಚಿಂತೆ ಎಂಬ ಹಕ್ಕಿಗಳು ಕುಳಿತು ಹಗರಣ ಮಾಡುತ್ತಿರುತ್ತವೆ. ಯಾವಾಗ ನಾವು ನಮ್ಮನ್ನು ಮರೆತು ಹರಿಭಜನೆಯೆಂಬ ಅಮೃತವನ್ನು ಪಾನ ಮಾಡುತ್ತೇವೊ ಆಗ ಚಿಂತೆಯೆಂಬ ಹಕ್ಕಿಗಳು ದೂರ ಹಾರಿ ಹೋಗುತ್ತವೆ ನಿರ್ಮಲವಾದ ಚಿತ್ತ ತಾನೇ ತಾನಾಗಿ ದೊರೆಯುತ್ತದೆ. ಭಕ್ತಿ ಯೋಗದಿಂದ ಚೈತನ, ಕಬೀರ, ತುಲಸಿ ಮೊದಲಾದ ಉತ್ತರ ಭಾರತದ ದಾಸರುಗಳು ಮುಕ್ತಿಯ ಗೈದಿದರು. ಪುರಂದರ ದಾಸರು ಸಕಲ ವೈಭವವನ್ನು ತ್ಯಜಿಸಿ, ಹಾಡಿ ಕುಣಿದು ಕೃಷ್ಣನನ್ನೇ ಕುಣಿಸಿದರು. ಕನಕದಾಸರಂತೂ ಉಡುಪಿಯ ಶ್ರೀ ಕೃಷ್ಣನನ್ನು ಭಕ್ತಿಯಿಂದ ಹಾಡಿ ಪಶ್ಚಿಮಕ್ಕೇ ತಿರುಗಿ ನಿಲ್ಲುವ ಹಾಗೆ ಮಾಡಿಬಿಟ್ಟರು. ಇವರದೆಲ್ಲಾ ಹೀಗಾದರೆ ಒರಿಸ್ಸಾದ ಜಗನ್ನಾಥ ಪುರಿಯ ಹತ್ತಿರದ ಕಿಂದು ಬಿಲ್ವ ಗ್ರಾಮದಲ್ಲಿ ಜನಿಸಿದ ಜಯದೇವ ಕವಿಯು ತನ್ನ 'ಗೀತಗೋವಿಂದ'ವೆಂಬ ಅಷ್ಟಪದಿಯನ್ನು ರಚಿಸಿ ಹಾಡಿ ಜಗನ್ನಾಥನಿಗೆ ಶೃಂಗಾರ ರಸದ ಅಭಿಷೇಕವನ್ನೇ ಮಾಡಿದನು. ಒಮ್ಮೆ ಜಯದೇವನು ಶ್ರಾದ್ಧದ ಮನೆಯಿಂದ ಬಾರಿ ದಕ್ಷಿಣೆಯೊಂದಿಗೆ ಮರಳುತ್ತಿದ್ದಾಗ ದಾರಿಗಳ್ಳರು ಇವರ ಕೈ ಕಾಲುಗಳನ್ನು ಕತ್ತರಿಸಿ ಹಣವನ್ನು ದೋಚಿಕೊಂಡು ಹೋದರು. ಭಕ್ತಿಯೋಗಿಯಾದ ಜಯದೇವನಿಗೆ ಕೈ ಕಾಲುಗಳು ಮರಳಿ ಬಂದವು. ಮತ್ತೊಂದು ಸಲ ಪುರಿಯ ರಾಜನ ತಮ್ಮನು ಮೃತಪಟ್ಟಾಗ ಜಯದೇವನ ಸತಿ ಪದ್ಮಾವತಿಯು ರಾಣಿಯನ್ನು ನೋಡಲು ಅಂತಃಪುರಕ್ಕೆ ಹೋದಳು. ಆಗ ರಾಣಿಯು, ಸತಿ ಹೋಗುವವಳನ್ನು ನೋಡಲು ಯಾಕಮ್ಮಾ ಬಂದೆ ಎಂದು ಕೇಳಿದಳು. ಮುಗ್ಧಳಾದ ಪದ್ಮಾವತಿಯು, 'ಎಂತಹ ಸುಳ್ಳು' ನಾನಾಗಿದ್ದರೆ ಗಂಡನ ಸಾವಿನ ಸುದ್ಧಿ ಕೇಳಿದ ತಕ್ಷಣ ಸಾಯುತ್ತಿದ್ದೆ. ಗಂಡ ಸತ್ತ ಮೇಲೆ ತಾನು ಸಾಯಲು ಉಪಾಯ ಹೂಡಬೇಕೆ ? ಎಂದು ಕೇಳಿದಳು. ಒಂದು ಸಲ ಜಯದೇವನು ರಾಜನೊಂದಿಗೆ ಪುರಿಯ ದೇವಸ್ಥಾನದಲ್ಲಿ ಉಳಿದುಕೊಂಡನು. ರಾಣಿಯು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಪರೀಕ್ಷಿಸಲು, ಜಯದೇವನು ಸತ್ತನೆಂದು ಸುಳ್ಳು ಹೇಳಿದಳು. ಗಂಡನ ಸಾವಿನ ಸುದ್ಧಿ ಕಿವಿಗೆ ಬಿದ್ದ ತಕ್ಷಣ ಪದ್ಮಾವತಿಯು ಸತ್ತುಬಿದ್ದಳು. ರಾಣಿಗೆ ಬಹಳ ಸಂತಾಪವಾಯಿತು. ಆದರೆ ಸತ್ತವರು ಬಹುವರೆ ? ಈ ಘಟನೆಯನ್ನು ನೋಡಿ ರಾಜನಿಗೆ, ಜಯದೇವನಿಗೆ ಆಶ್ಚರ್ಯವಾಯಿತು. ಆಗ ಜಯದೇವನು "ಪ್ರಿಯೇ ಚಾರುಶೀಲೆ" ಎಂಬುದಾಗಿ ಮೈಮರೆತು ಹಾಡಿ ನರ್ತಿಸಿದಾಗ ಅವಳು ಮತ್ತೆ ಜೀವಿಸಿದ್ದಳು. ಗುರುವಾಯೂರಿನಲ್ಲಿಯೂ, ನಾರಾಯಣ ಭಟ್ಟಾಗಿರಿಗಳು ವಾತರೋಗದಿಂದ ನರಳುತ್ತಿದ್ದಾಗ "ನಾರಾಯಣೀಯಂ" ಎಂಬ ಗ್ರಂಥವನ್ನು ಬರೆದು [ಇದು ಭಗವತದ ಪದ್ಯರೂಪ] ನೂರನೆಯ ಅಧ್ಯಾಯವನ್ನು ಬರೆಯುತ್ತಿದ್ದಾಗ ಗುರುವಾಯೂರಿನ ಶ್ರೀ ಕೃಷ್ಣ ಪರಮಾತ್ಮ ಪ್ರತ್ಯಕ್ಷನಾಗಿ ಅವರನ್ನು ವಾತ ರೋಗದಿಂದ ಮುಕ್ತರನ್ನಾಗಿ ಮಾಡಿದನು. ಹೀಗೆ ಬೇಕಾದಷ್ಟು ಪ್ರಸಂಗಗಳು ನಡೆದುಹೋಗಿದೆ. ನಡೆಯುತ್ತಲೂ ಇದೆ. ಲೌಕಿಕ ಪ್ರಪಂಚಕ್ಕೆ ಇವರೆಲ್ಲಾ ಭಕ್ತಿ–ಯೋಗಿಗಳು. ಹುಚ್ಚರು ಇವರೆಲ್ಲಾ ಲೌಕಿಕವನ್ನೇ ನಿಜವೆಂದು ನಂಬಿರುವ ನಾವೇ ನಿಜವಾದ ಹುಚ್ಚರು.

ಭಕ್ತಿ ಮಾರ್ಗದಿಂದ ಮುಕ್ತಿಯತ್ತ ಸಾಗುವುದು ಬಹಳ ಬಳಸುದಾರಿ. ಆದರೆ ಇದು ರಾಜಮಾರ್ಗ. ಇಲ್ಲಿ ಯಾವುದೇ ರೀತಿಯ ಅಪಾಯವಿಲ್ಲ. ತಪ್ಪು ಮಾಡಿದರೆ ಮಕ್ಕಳು ತಪ್ಪು ಮಾಡಿದರೆಂದು ದೇವರು ತಿದ್ದಿಕೊಳ್ಳುತ್ತಾನೆ. ಆದರೆ ಯಂತ್ರ, ಮಂತ್ರ, ತಂತ್ರದ ಹಾದಿ ಬಹಳ ಕಠಿನವಾದುದು. ಸ್ವಲ್ಪ ಕಾಲು ಜಾರಿದರೂ ಕಂದರದಲ್ಲಿ ಬೀಳುವುದು ಖಂಡಿತ. ಯಜ್ಞ, ಯಾಗಾದಿಗಳಲ್ಲಿ ಮಂತ್ರೋಚ್ಚಾರಣೆ ಮಾಡುವಾಗ ಸ್ವಲ್ಪ ತಪ್ಪಾದರೂ ಪೂರ್ತಿ ಫಲವೇ ತಪ್ಪಾಗುತ್ತದೆ. ಅಲ್ಲದೆ ಮೂಲ ಉದ್ದೇಶ [ಸಂಕಲ್ಪ] ನಷ್ಟವಾಗುತ್ತದೆ. ಆದ್ದರಿಂದ ಅಪಾಯ ರಹಿತವಾದ ಭಕ್ತಿಯೋಗವೇ ಮುಕ್ತಿಗೆ ಸುಲಭ ಸಾಧನ

ಈಗ ಕಲಿಯುಗ, ಕಲಿಯುಗದಲ್ಲಿ ಭಕ್ತಿಗೆ ಪ್ರಾಧಾನ್ಯತೆ ಹೆಚ್ಚು. ಕೇವಲ ದೇವರ ನಾಮ ಜಪದಿಂದ ಮುಕ್ತಿ ದೊರೆಯುವುದು ಇದೊಂದು ವಿಷಯದಲ್ಲಿ ಕಲಿಯುಗದ ಜನರು ಧನ್ಯರೆಂದು ವ್ಯಾಸ ಮಹರ್ಷಿಗಳೇ ಹೇಳಿದ್ದಾರೆ.

ಈ ಯಾಂತ್ರಿಕ ಯುಗದಲ್ಲಿ ದೇವರ ನಾಮ ಜಪಕ್ಕಾಗಲಿ,

[ಮುಂದಿನ ಪುಟಕ್ಕೆ ಮುಂದುವರೆದಿದೆ]

[9ನೇ ಪುಟದಿಂದ]

ಹೀಗೆ ಜನರನ್ನು ಆ ಭಗವಂತನಿಂದಲೂ ತೃಪ್ತಿಪಡಿಸಲು ಸಾಧ್ಯವಿಲ್ಲದ ಮಾತು. ಮನುಷ್ಯನ ಸೃಷ್ಟಿಯೊಂದಿಗೇ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮತ್ಸರಗಳೂ ಜನಿಸಿಬಿಟ್ಟಿವೆ. ಎಷ್ಟೇ ಸಿಕ್ಕಿದರೂ ಮಾನವ ಇತರರನ್ನು ಹಂಗಿಸುತ್ತಾ, ಜರೆಯುತ್ತಾ ಕಾಲ ಕಳೆಯುತ್ತಾನೆ.

'ಹಿಂದೆ ರಾಕ್ಷಸರು–ಈಗ ರಾಜಕಾರಣಿಗಳು' ಸ್ವಾರ್ಥ ಸಾಧನೆಗಾಗಿ ಮಾನವ ಹುಟ್ಟುಹಾಕುತ್ತಿರುವ 'ಅಣುಚೈತನ್ಯ' ಮುಂದೊಂದು ದಿನ ಸಿಡಿದು ಮನುಷ್ಯನಿಂದಲೇ ಮನುಕುಲದ ನಾಶ ಖಂಡಿತ.

ಭಜನೆ ಮಾಡಲಿಕ್ಕಾಗಲಿ ಸಮಯವೆಲ್ಲಿದೆ ಎಂದು ಕೇಳಬಹುದು. ಮನಸ್ಸಿದ್ದರೆ ಮಾರ್ಗವಿದ್ದೇ ಇದೆ. ನಿಮ್ಮ ದಿನ ನಿತ್ಯದ ಕೆಲಸಗಳನ್ನು ಮಾಡುತ್ತಾ ಮನೆಯ ಇತರ ಸದಸ್ಯರಿಗೆ ತೊಂದರೆ ಆಗದ ರೀತಿಯಲ್ಲಿ ಮೆಲು ಧ್ವನಿಯಲ್ಲಿ [ನಿಮಗೆ ಮಾತ್ರ ಕೇಳಿಸುವ ಹಾಗೆ] ನಾಮ, ಜಪ ಅಥವಾ ಹಾಡುಗಳನ್ನು ಹೇಳಬಹುದಲ್ಲವೆ ? ಭಾರತ ವರ್ಷ ಕರ್ಮ ಭೂಮಿ. ಕೇವಲ ಪುಣ್ಯ ಪುರುಷರು ಮಾತ್ರ ಈ ಭೂಮಿಯಲ್ಲಿ ಜನಿಸುತ್ತಾರೆ. ನಿಷ್ಕಾಮಂತರಾಗಿ ತಮ್ಮ ಪಾಲಿನ ಕರ್ತವ್ಯವನ್ನು ಮಾಡುತ್ತಾ ದೇವರ ಸ್ಮರಣೆ ಮಾಡಲು ಸಮಯದ ಅಭಾವವೇನು ಇಲ್ಲವಲ್ಲ. ಅಡುಗೆ ಮಾಡುವಾಗ ದೇವರ ನಾಮ ಜಪಿಸಿಕೊಂಡು ಅಥವಾ ಹಾಡು ಗುನುಗಿಕೊಂಡು ಮಾಡುವುದರಿಂದ, ಪ್ರಪುಲ್ಲವಾದ ಮನವಿರುತ್ತದೆ. ಇದರಿಂದಾಗಿ ಅಡುಗೆ ರುಚಿಕಟ್ಟಾಗಿರುತ್ತದೆ. ಅಲ್ಲದೆ ನಿಮ್ಮ ಮೈಯಲ್ಲಿ ಉಂಟಾಗುವ ಕಂಪನ [Vibration] ಸೌಟಿನ ಮೂಲಕ ಅಡುಗೆಗೂ, ಅದನ್ನು ತಿನ್ನುವವರಿಗೂ ಹೋಗಿ ಅವರಿಗೂ ಸದ್ಭಾವನೆ ಬೆಳೆದು ಅವರಲ್ಲೂ ಪರಿವರ್ತನೆ ಉಂಟಾಗುತ್ತದೆ. ಇದಕ್ಕೆಲ್ಲಾ ಸಾಕಷ್ಟು ಸಮಯ ಹಿಡಿಸಬಹುದು

ಹೊತ್ತು ಹೋಗುತ್ತಿಲ್ಲವೆಂದು ನಿದ್ರೆ ಮಾಡುವುದು, ಹಾಳು ಹರಟೆಯಲ್ಲಿ ಕಾಲ ಕಳೆಯುವುದು, ಕೀಳು ಮಟ್ಟದ ಕತೆ ಕಾದಂಬರಿಗಳನ್ನು ಓದುವುದು ಅಥವಾ ಸಿನೆಮಾ ಅಲ್ಲಿ ಇಲ್ಲಿ ತಿರುಗಾಡಲು ಹೋಗುವುದು ಹೀಗೆ ಕಾಲ ಕಳೆಯುವುದಕ್ಕಿಂತ ಈ ಸಮಯವನ್ನು ಉಪಯೋಗಿಸಿಕೊಂಡು ಒಳ್ಳೆಯ ಹವ್ಯಾಸ ಬೆಳೆಸಿಕೊಳ್ಳಬಹುದು. "ಮಾನವ ಜನ್ಮ ದೊಡ್ಡದು ಇದ ಹಾಳು ಮಾಡಬೇಡಿ ಹುಚ್ಚಪ್ಪಗಳಿರಾ" ಎಂಬ ಜನಪ್ರಿಯ ದಾಸರ ಪದವನ್ನು ನೆನಪಿಸಿಕೊಳ್ಳಿ. ಈ ನರಜನ್ಮದಲ್ಲಿ ಮಾತ್ರ ನಾವು ಬಾಯಿಬಿಟ್ಟು ಆ ಪರಮಾತ್ಮನನ್ನು ಕೂಗಿ ಕರೆಯಬಹುದು. ನಮ್ಮ ಮಾತು ಬರುವ ನಾಲಗೆಯನ್ನು ಸಾರ್ಥಕಪಡಿಸಿಕೊಳ್ಳಬಹುದು.

ಆಸ್ತಿ, ಮನೆ, ಒಡವೆ, ವಸ್ತ್ರ ಕೊನೆಗೆ ನಮ್ಮ ಸಂಸಾರದ ಒಬ್ಬ ಸದಸ್ಯ ಕೂಡ ನಾವು ಹೋಗುವಾಗ ನಮ್ಮ ಜೊತೆಯಲ್ಲಿ ಬರುವುದಿಲ್ಲ. ಒಂದಲ್ಲ ಒಂದು ದಿನ ನಾವು ಈ ನಶ್ವರ ಶರೀರವನ್ನು ತ್ಯಜಿಸಲೇಬೇಕೆಂಬ ಸತ್ಯ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಇಲ್ಲಿರುವಷ್ಟು ದಿನ ಬದುಕಲೇ ಬೇಕಲ್ಲಾ ? ಎನ್ನುವುದು ಅಷ್ಟೇ ಸತ್ಯವಾದುದು. ಹಾಗಂತ ಜೀವನ ಪರ್ಯಂತ ಸುಖ ಭೋಗ ವಸ್ತುಗಳ ಸಂಪಾದನೆಯಲ್ಲಿಯೇ ತಲೆ ಕೆಡಿಸಿಕೊಂಡು ವ್ಯರ್ಥ ಕಾಲ ಕಳೆಯಬೇಕೆ? ನಾಳೆ ನಾವು ಹೋಗುವಾಗ ಕೇವಲ ನಮಗೇ, ನಮ್ಮ ಸ್ವಂತಕ್ಕೆ ಬರುವುದು ನಾವು ಗಳಿಸಿದ ಪಾಪ ಪುಣ್ಯಗಳು ಮಾತ್ರ. ಕೆಲವರು ಹೇಳಬಹುದು ವೃದ್ಧಾಪ್ಯ ಬಂದಾಗ ಇದ್ದೇ ಇದೆಯಲ್ಲಾ, ಈಗಿನಿಂದ ಯಾಕೆ ಭಜನೆ, ಜ್ಞಾನದ ಮೂಲಕ ಆತ್ಮ ಶಾಂತಿಯನ್ನು ಹೊಂದಿ, ಮುಕ್ತಿ ಸತ್ಸಂಗ ಎಂದು. ಆದರೆ ದೇಹಕ್ಕೆ ಬಾಲ್ಯ, ಯೌವ್ವನ, ವೃದ್ಧಾಪ್ಯ, ಮುಪ್ಪು ಬರಬಹುದು ಆತ್ಮಕಲ್ಲ, ಆತ್ಮಕ್ಕೆ ವೃದ್ಧಾಪ್ಯವೂ ಇಲ್ಲ ಬಾಲ್ಯವೂ ಇಲ್ಲ. ದೇವರ ನಾಮ ಸ್ಮರಣೆಗೆ ಯೌವ್ವನವೇ ಹೆಚ್ಚು ಅನುಕೂಲಕರವಾಗಿದೆ. ವೃದ್ಧಾಪ್ಯ ಮಾನವರಿಗೆ ಒಂದು ಖಾಯಿಲೆ ಇದ್ದ ಹಾಗೆ. ವೃದ್ಧಾಪ್ಯದಲ್ಲಿ ವಾತ, ಪಿತ್ತ, ಕಫದ ಉಲ್ಬಣತೆಯಲ್ಲಿ ನರಳುವಿಕೆಯೇ ಹೆಚ್ಚು. ಆದ್ದರಿಂದ ನೀವು ಚೆನ್ನಾಗಿ ಆರೋಗ್ಯವಂತರಾಗಿ ಇರುವಾಗಲೆ ನಿಮ್ಮ ಪರಲೋಕ ಯಾತ್ರೆಗಾಗಿ, ಮುಕ್ತಿಗಾಗಿ ಬೇಕಾದ ಐಶ್ವರ್ಯವನ್ನು ಗಳಿಸಿಕೊಳ್ಳಿ. ಇದಕ್ಕಾಗಿ ಕಷ್ಟಪಟ್ಟು ಬೆವರು ಸುರಿಸಬೇಕಾಗಿಲ್ಲ. ಕೇವಲ ಭಕ್ತಿ, ವೈರಾಗ್ಯದಿಂದ ಈ ಸಂಪತ್ತನ್ನು ಪಡೆಯಬಹುದು. ಇದನ್ನು ಯಾರೂ ಅಪಹರಿಸಲಾರರು. ಸಂಸಾರದಲ್ಲಿ ಇದ್ದೂ ಇಲ್ಲದ ಹಾಗೆ ಜೀವನ ಮಾಡುವುದನ್ನು ಕಲಿತುಕೊಳ್ಳಿ. ಕರ್ಮಾನುಸಾರ ಹಿಂದೆ ಯಾರದೋ ಹೊಟ್ಟೆಯಲ್ಲಿ ಹುಟ್ಟಿದವರು ಇಂದು ನಮ್ಮ ಮಕ್ಕಳಾಗಿರುತ್ತಾರೆ. ನಾಳೆ ಇನ್ಯಾರದೋ ಮನೆಯ ಕುಲದೀಪಕರಾಗುತ್ತಾರೆ. ಎಲ್ಲರೂ ಆ ಪರಮಾತ್ಮನ ಮಕ್ಕಳೇ ಅಲ್ಲವೆ ? ನಾವೆಷ್ಟೇ ಹೋರಾಡಿದರೂ ಅವರೇನಾಗಬೇಕೆಂದು ಆ ಪರಮಪಿತ ನಿರೂಪಿಸಿರುತ್ತಾರೋ ಅಂತೆಯೇ ಅವರಾಗುತ್ತಾರೆ. ಆದ್ದರಿಂದ ನೀವು ಕೇವಲ ಕರ್ತವ್ಯದ ಕಡೆ ಗಮನ ಕೊಟ್ಟು ಫಲವನ್ನು ಆ ಪರಮಾತ್ಮನಿಗೇ ಬಿಡಿ. ಒಂದು ಜನ್ಮದಲ್ಲಿ ಮಕ್ಕಳಾಗಿರುವವರಿಗೆ ನಾವಿಷ್ಟು ಅಕ್ಕರೆ ತೋರಿಸುವಾಗ ಜನ್ಮ ಜನ್ಮಾಂತರಗಳವರೆಗೂ [ಅನಂತಕಾಲದವರೆಗೂ] ಎಲ್ಲಾ ಆತ್ಮಗಳ ಪಿತನಾಗಿರುವ ಆ ನಾರಾಯಣನಿಗೆ ತನ್ನ ಮಕ್ಕಳ ಮೇಲೆ ಎಷ್ಟು ಅಕ್ಕರೆ ಇರಬಹುದು ! ಯೋಚಿಸಿ. ಕರ್ಮಾನುಸಾರ ಸುಖ ದುಃಖಗಳಿಗೆ ಈಡು ಮಾಡಿ ದಂಡಿಸಿ ಸರಿದಾರಿಗೆ ಎಳೆದು, ಕೊನೆಗೆ ತನ್ನೆಡೆಗೆ ಸೆಳೆದುಕೊಳ್ಳುತ್ತಾನೆ. ಪಾಪ ಪುಣ್ಯಗಳೆರಡು ಮತ್ತೆ ಜನನ ಮರಣಗಳೆಡೆಗೇ ಕೊಂಡೊಯ್ಯುತ್ತದೆ. ಹೇಗೆಂದರೆ, ನೀವು ಭತ್ತವನ್ನು ಹಸನು ಮಾಡುವಾಗ ಹೆಚ್ಚು ಘನವಾದ ಕಾಳುಗಳು ಮೊರದಲ್ಲಿ ಉಳಿದು, ಉಳಿದ ಹೊಟ್ಟು ದೂರ ಹಾರಿ ಬೀಳುವಂತೆ, [ಮೊರದಲ್ಲಿ ಉಳಿದ ಕಾಳುಗಳು ಮುಕ್ತಿ ಸಿಕ್ಕಿದ ಆತ್ಮಗಳು ಜೊಳ್ಳು-ಪಾಪಿಷ್ಟ ಆತ್ಮಗಳು] ಮತ್ತೆ ಜೀವನ್ಮರಣ ಚಕ್ರಕ್ಕೆ ಸಿಕ್ಕಿ ಸುತ್ತುತ್ತಿರುತ್ತವೆ. ಆದ್ದರಿಂದ ನಾವು ಯಾವ ಆಮಿಷಕ್ಕೂ ಬಲಿಯಾಗದೆ ನಿರ್ಲಿಪ್ತ ಭಾವನೆಯಿಂದ ಏಕಾಗ್ರ ಚಿತ್ತದಿಂದ ಭಗವಂತನ ಪಾದ ಸ್ಮರಣೆಯ ಮೂಲಕ ಮುಕ್ತಿಯನ್ನೇ ಗುರಿಯಾಗಿಟ್ಟುಕೊಂಡು ಬಾಳೋಣ. ನಮ್ಮಲ್ಲಿರುವ ಅರಿಷಡ್‌ ವರ್ಗಗಳೆಂಬ ಸೌದೆಗೆ ಭಕ್ತಿ ಎಂಬ ಬೆಂಕಿಯ ಕೊಟ್ಟು, ಹರಿನಾಮ ಎಂಬ ಗಾಳಿಯನ್ನೂದಿ, ಅರಿವೆಂಬ ಜ್ಞಾನದ ಮೂಲಕ ಆತ್ಮಶಾಂತಿಯನ್ನು ಹೊಂದಿ ಮುಕ್ತಿ ಎಂಬ ಪರಮಾತ್ಮನ ಪಾದ ಕಮಲಗಳಲ್ಲಿ ಪರಮ ಪದವಿಯನ್ನು ಹೊಂದೋಣವೇ. ●

## ಮಡಿಕೇರಿಯಲ್ಲಿ ನಡೆದ ಜಾನಪದ ಲೋಕದಲ್ಲಿ ಮೇಳೈಸಿದ ಗೌಡರು

ಕಳೆದ ನವೆಂಬರ್ 27, 28ರಲ್ಲಿ ಕೊಡಗಿನ ರಾಜಧಾನಿ ಮಡಿಕೇರಿಯಲ್ಲಿ ರಾಜ್ಯ ಮಟ್ಟದ ಜನಪದ ಮೇಳ ಅದ್ದೂರಿಯಾಗಿ ಜರುಗಿತು. ಈ ಮೇಳಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಹಸ್ರಾರು ಕಲಾಕಾರರು ಮತ್ತು ಕಲಾ ಪ್ರೇಮಿಗಳು ಆಗಮಿಸಿದ್ದರು. ಅಂತೆಯೇ ಹತ್ತಾರು ರಾಷ್ಟ್ರಮಟ್ಟದ ಪ್ರಮುಖ ತಂಡಗಳಾಗಿ ಹುತ್ತರಿ ಕೋಲಾಟ, ಕುರುಬರ ಕೋಲಾಟ, ಎರವರ ಕುಣಿತ, ಭೂತದ ಕುಣಿತ, ಬೀಸು ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ, ಗೊರವರ ಕುಣಿತ, ಪಟದ ಕುಣಿತ, ಪೂಜಾ ಕುಣಿತ ಹಾಗೂ ಇನ್ನಿತರ ಹಲವಾರು ಕುಣಿತಗಳು ಪ್ರದರ್ಶನಗೊಂಡವು.

ಜಿಲ್ಲೆಯ ಸುಮಾರು 22 ತಂಡಗಳು ಭಾಗವಹಿಸಿದ್ದವು. ಅದರಲ್ಲಿ ಗೌಡ ಜನಾಂಗದ ಸುಮಾರು 12 ತಂಡಗಳು ಉತ್ತಮ ಪ್ರದರ್ಶನ ನೀಡಿ ಮನ ರಂಜಿಸಿದವು. ಈ ಮೇಳದಲ್ಲಿ ಭಾಗಮಂಡಲದ ಮೊಟ್ಟನ ಅಮೂಲ್ ತಂಡದ ಹುತ್ತರಿ ಕೋಲಾಟ, ಮಡಿಕೇರಿಯ ಬೈತಡ್ಕ ಜಾನಕಿ ಬೆಳ್ಳಪ್ಪ ತಂಡದಿಂದ ಹರಿಸೇವೆ-ನೃತ್ಯ ರೂಪಕ, ಕೆದಂಬಾಡಿ ಬಿಂದು, ಜಯಶ್ರೀ ಇವರಿಂದ ಹುತ್ತರಿ ಹಾಡು, ಐಕೊಳ ಕೊಂಪುಳಿ ಗಣೇಶ ತಂಡದಿಂದ ಕೋಲಾಟ ಪ್ರದರ್ಶನ, ಐಕೊಳ ಉಳುವಾರನ ಶಾಂತಿ ತಂಡದಿಂದ ಗಂಗೆ ಪೂಜೆ, ಗಾಳಿಬೀಡುವಿನ ಕೋಳುಮುಡಿಯನ ಅನಂತ ತಂಡದಿಂದ ಚೌರಿ ಆಟವು ಪ್ರದರ್ಶಿಸಲ್ಪಟ್ಟಿತು. ಅನುಭವದ ಕೊರತೆಯಲ್ಲಿ ಸ್ವಲ್ಪ ತಡವರಿಸಿದರೂ ರಾಜ್ಯ ಮೇಳದಲ್ಲಿ ಉತ್ತಮ ಪ್ರದರ್ಶನ ನೀಡಿ ಜನ ಮನ ಸೂರೆಗೊಳ್ಳುವಲ್ಲಿ ಯಶಸ್ವಿಯಾಯಿತು. ಉಳಿದಂತೆ ಸಂಪಾಜೆಯ ಪಂಜುರ್ಲಿ ಭೂತದ ಕುಣಿತ, ತಾಕೇರಿಯ ಸುಗ್ಗಿ ಕೋಲಾಟ, ಚೆಂಬು ಗ್ರಾಮದ ಕಂಗೀಲು ನೃತ್ಯ, ಕಲ್ಲುಗುಂಡಿಯ ಸಿದ್ಧವೇಷ, ತಾಕೇರಿಯ ಕೋಲಾಟ, ಸೋಮವಾರಪೇಟೆಯ ಬೀಸುಕತ್ತಿ ತಂಡಗಳು ಭಾಗವಹಿಸಿ ಯಶಸ್ವಿಗಳಿಸಿದ್ದು ನಿಜಕ್ಕೂ ವಿಶೇಷವಾಗಿತ್ತು.        ವರದಿ : ಪೆಟ್ಟೀಜನ ಪುರಿ, ಮಡಿಕೇರಿ.

## ನಕ್ಕು ಬಿಡಿ

ಪತಿ-'ಹ! ಹ! ಹ! ಈ ಹೊಸ ಸೀರೆಯಲ್ಲಿ ನೀನು ಜೀಬ್ರಾ ತರಹ ಕಾಣಿಸ್ತೀಯ'

ಪತ್ನಿ-'ನಗಿ, ಸಾಕಷ್ಟು ನಕ್ಕು ಬಿಡಿ, ಸೀರೆ ಬಿಲ್ ನೋಡಿದ ನಂತರ ನಿಮಗೆ ನಗಲು ಸಾಧ್ಯವಿಲ್ಲ.'

## ಸುವರ್ಣ ಮಹೋತ್ಸವ ಸಮಾರಂಭ

ಸ. ಮಾ. ಪ್ರಾ. ಶಾಲೆ ಕುಂಬಳಚೇರಿ ಪೆರಾಜೆ ಕೊಡಗು ಇದರ 50ನೇ ವರ್ಷದ "ಸುವರ್ಣ ಮಹೋತ್ಸವ"ವನ್ನು 5-12-98ರಂದು ಮ. ತಾ. ಪಂಚಾಯತಿಯ ಅಧ್ಯಕ್ಷರಾದ ದೊಡ್ಡಡ್ಕ ಬಾಲಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಂದಿನ ಸಮಾರಂಭದ ವೇದಿಕೆಯಲ್ಲಿ ಶ್ರೀಯುತರುಗಳಾದ ಕುರುಂಜಿ ವೆಂಕಟರಮಣ ಗೌಡರು, ಸಂಸದ ಧನಂಜಯ ಕುಮಾರ್, ಶಾಸಕ ಮಾದಪ್ಪ ಇನ್ನು ಮುಂತಾದವರು ಉಪಸ್ಥಿತರಿದ್ದರು.

ಪ್ರೊ॥ ಕೋಡಿ ಕುಶಾಲಪ್ಪಗೌಡ [ಶಿಕ್ಷಣ ಮತ್ತು ಸಾಹಿತ್ಯ] ದೊಡ್ಡಡ್ಕ ಬಾಲಕೃಷ್ಣ [ಸಮಾಜ ಸೇವೆ ಮತ್ತು ಅಭಿವೃದ್ಧಿ] ರಾಘವೇಂದ್ರ ಪ್ರಸಾದ್ [ಪ್ರತಿಭಾ ಪುರಸ್ಕಾರ] ಇವರನ್ನು ಸನ್ಮಾನಿಸಲಾಯಿತು. ಶಾಸಕ ದಂಬೆಕೋಡಿ ಮಾದಪ್ಪನವರು ಮಾತನಾಡುತ್ತ ಪೆರಾಜೆಯ ಜನರನ್ನು ಮುಕ್ತಕಂಠದಿಂದ ಪ್ರಶಂಶಿಸಿದರು. ದಿ॥ ನಿಡ್ಯಮಲೆ ಮುದ್ದಪ್ಪ, ದಿ॥ ನಿಡ್ಯಮಲೆ ಸೋಮಣ್ಣ, ದಿ॥ ಮಾವೋಜಿ ಜನಾರ್ಧನ, ಕೋಡಿ ಕುಶಾಲಪ್ಪಗೌಡ ಮುಂತಾದ ಪೆರಾಜೆ ಹಾಗೂ ನಾಡಿನ ಗಣ್ಯ ವ್ಯಕ್ತಿಗಳ ವ್ಯಕ್ತಿತ್ವವನ್ನು ಕೊಂಡಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವಿಶೇಷ ಆಮಂತ್ರಿತರಾಗಿ ಬೆಂಗಳೂರಿನ ಅಮ್ಮಾಜೀರ ಪೊನ್ನಪ್ಪ ತಂಡದವರು ಆಗಮಿಸಿದ್ದರು. ಶ್ರೀಯುತರ "ಜ್ಯೋತಿಯ ಬೆಳಗೋಣ-ಕಾವೇರಿ ನಾಡನ್ನು ಕಟ್ಟೋಣ" ಎನ್ನುವ ಗೀತಾ ನೃತ್ಯದೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ನೆರೆದ ಜನರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು. ಇತರ ಪತ್ರಿಕಾ ಬಳಗದವರಲ್ಲದೆ ಕೊಡಗು ಸಂಗಾತಿ ಪತ್ರಿಕೆಯ ಗೌರವ ಸಂಪಾದಕ ಪಟ್ಟಡ ಎಂ. ಪ್ರಭಾಕರರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರದಿ : **ಬೈನೆರವನ ಇಂದ್ರಕುಮಾರ್,** ಮೈಸೂರು.

## ನಿಧನ

ದಿನಾಂಕ **1-12-98**ನೇ ಮಂಗಳವಾರ ಮಗ್ಗದ ಮಾಸ್ತರು ಎಂದೇ ಹೆಸರುವಾಸಿಯಾದ **ಮೋಂಟಡ್ಕ ಶೇಷಪ್ಪಗೌಡರು** [ಮೈಸೂರಿನ ರಂಗಾಯಣ ಕಲಾವಿದೆ ಕುಮಾರಿ ಎಂ. ಎಸ್. ಗೀತಾ ಮೋಂಟಡ್ಕರವರ ತಂದೆ] ವೈಕುಂಠವಾಸಿಯಾಗಿರುತ್ತಾರೆ. ಶ್ರೀಯುತರಿಗೆ 81 ವರ್ಷ ವಯಸ್ಸಾಗಿತ್ತು. ಇವರು ಪತ್ನಿ, ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಸಂಗಾತಿ ಚಿರಶಾಂತಿಯನ್ನು ಬಯಸುತ್ತದೆ.

## ಅರೆ ಭಾಷಿಕ ವಿಭಾಗ

### ಧಾರವಾಹಿ-17

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ. ಇ. ಮಹಮ್ಮದ್

# ಕರಿ ಚಿನ್ನ

**ಕಳ್ದ ಸಂಚಿಕೇಲಿ . ...**

ನಾಡ್‌ಕೊಲ್ಲಿ ಮಾದಪ್ಪ ಮಗ್ಳು ಗೌರನ ಮೊದ್ವೆಗೆ ದುಡ್ಡ್ ಕೇಳಿಕೆತೇಳಿ ತಾರನ ಮನೆಗೆ ಹೋದೆ. ಅಲ್ಲಿ ದುಡ್ಡ್ ಸಿಕ್ಕದಿರ್‍ಕನ ಇದ್ದ ಒಂದ್ ಏಕ್ರೆ ಜಾಗ ಮಾರಿ ವರದಕ್ಷಿಣೆ ತೇಳಿ ಫ್ಯಾಕ್ಟ್ ಮಾದಯ್ಯನ ಸಾಕ್ಷಿ ನಿಲ್ಸಿ ದೇವಯ್ಯನ ಕೈಲಿ 40 ಸಾವ್ರ ರೂಪಾಯಿ ಕೊಟ್ಟದೆ. ಮೊದ್ವೆಗೆ ಇರೋ ವ್ಯವಸ್ಥೆ ಎಲ್ಲಾ ಮಾಡಿ ಚಿನ್ನ ತೆಗೆಯಕೆ ತೇಳಿ ಮಾದಪ್ಪನೂ, ಅವರ ಮಕ್ಕಳ್ನೂ ದೇವಯ್ಯ ಅವನ ಕಾರ್ಲೆ ಕರ್‍ಕಂಡ್ ಹೋದೆ.

ಮುಂದೆ ಓದಿ...........

ಮೊದ್ವೆ ದಿನದಂದ್ ಬೋರ್‌ಗುಡ್ಡೆ ದೇವಯ್ಯ ತನ್ನ ಎಲ್ಲಾ ಬಸ್‌ಗಳನ್ನ ಒಡ್ಸದೆ ನಿಲ್ಸೊಕೊಂತ ಆರ್ಡರ್ ಮಾಡ್ತ್. ಎಲ್ಲಾ ಬಸ್‌ಗಳ್ನ ಲಾಯ್ಕಾಗಿ ಅಲಂಕಾರ ಮಾಡಿ ಬುಟ್ ಮದುವಣ್ಣನ ಕಾರ್‌ನ ಹಿಂದೆ ಬೋರ್‌ಗುಡ್ಡೆ ಜಂಕ್ಷನ್‌ಲಿ ಒಂದು ಮೆರವಣಿಗೆ ನಡ್ಸಿಕೆ ದೇವಯ್ಯ ತೀರ್ಮಾನ ಮಾಡ್ತ್.

ಫೋಟೋ ಗ್ರಾಫರ್ ಮತ್ತ್ ವೀಡಿಯೋಗ್ರಾಫರ್ ರೆಡಿ ಆದೊ. ಸಾಲದಕ್ಕೆ ಜೀವನ್ ಫ್ರೆಂಡ್ಸ್‌ನ ಕೈಲೂ ಫಿಲಂ ಲೋಡ್ ಮಾಡಿದ್ದ ಕ್ಯಾಮರ ಇದ್ದೊ.

'ವೆಡ್ಸ್ ಟುಡೆ' ಅಂತ ಬರ್ದ ಜಾಹೀರಾತ್ ಎಲ್ಲಾ ಪ್ರಮುಖ ಪತ್ರಿಕೆಲೂ ರಂಜನ್ ಮತ್ತ್ ಗೌರನ ಫೋಟೋ ಸಹಿತ ಪ್ರಕಟ ಆತ್.

ಬೋರ್‌ಗುಡ್ಡೆಲಿ ಅದ್‌ವರೆಗೆ ಯಾರೂ ಹಾಕದಿದ್ದಂತ ಚಪ್ಪರ ರೆಡಿಯಾತ್. ಮೊದ್ವೆ ಬಾಳ ಗೌಜಿಲೇ ನಡ್ತ್. ಮೊದ್ವೆಗೆ ತಾರ ಮತ್ತ್ ಅವಳ ಗಂಡನೂ ಬಂದಿತ್ತ್. ಫ್ಯಾಕ್ಟ್ ಮಾದಯ್ಯ ತನ್ನ ಕಣ್ಣ್‌ಲಿ ಹರ್ದ ಸಂತಸದ ಕಣ್ಣೀರ್ ಒರ್ಸಿಕಂಡತ್. ಮೊದ್ವೆಗೆ ಬಂದವು ಹೊಟ್ಟೆ ತುಂಬ ಊಟ ಮಾಡ್ದೊ. ಕಳ್ಳ್ ಕುಡಿಯುವು ತವುಗೆ ಬೇಕಾದ ಬ್ರಾಂಡ್‌ಗಳ್ನ ಬೇಕಷ್ಟ ಹಿಗ್ಗಿದೊ.

ಮೊದ್ವೆಗೆ ಬಂದವುಕೆ ಅವರವರ ಮನೆಗೆ ಹೋಕೆ ಬೋರ್‌ಗುಡ್ಡೆ ದೇವಯ್ಯನ ಬಸ್‌ಗ ಸಾಲ್‌ಗಟ್ಟೆ ನಿಂತಿದ್ದೊ.

ರಾತ್ರೆ ಕ್ವಾಂಬರೆಲಿ ರಂಜನ್ ಒಮ್ಮೆ ಜೋರಾಗಿ ಉಸ್‌ರ್ ಬುಟ್ಟತ್.

ಮೊದ್ವೆ ಆದ ಮೇಲೆ ಬಂದ ಮೊದಲ ರಾತ್ರಿ ಅದಾಗಿದ್ರೂ 'ಫಸ್ಟ್‌ನೈಟ್'ದ್ ಕುತೂಹಲವೊಂದೂ ಅವನಲ್ಲಿ ಇತ್ತ್‌ಲೆ. ಇದ್ ಗೌರನೊಟ್ಟಿಗೆ ಕಳೀತಾ ಇರೋ ನೂರ ಐವತ್ತನೇ ನೈಟ್ ಆಗಿರಕೂ ಸಾಕ್.

ಎಲ್ಲ ಗೊತ್ತಿದ್ದೇ ಡ್ಯಾಡಿ ನಂಗೆ ಹ್ಯಾಂಡ್‌ಕಪ್ ಹಾಕಿಯೊಳೊ.

ಅಷ್ಟರ್ಲಿ ಬಾಗಿಲ್ ತೆಗೆಯೋ ಸದ್ದ್ ಕೇಳ್ತ್.

ಗೌರಂತೇಳೊ ಮೊದ್ವೆ ಗೂಡೆ ನಾಚಿಕೆ ಮರ್ತ್ ಒಳಗೆ ಬಂದ್ ಬಾಗ್ಲ ಹಾಕಿ ಬೋಲ್ಟ್ ಸಿಕ್ಸಿತ್. ಅಲ್ಲಿಂದ ಅವುಳು ರಂಜನ್‌ನ ಹತ್ರ ಹೋಗಿ ನಿತ್ತತ್.

ಮುಂದೆ ಎಂದೂ ಕಂಡಿರದಂತ ಸುಂದರಿ ನಂಗೆ ಗೌರ ಅವನ ಕಣ್ಣಿಗೆ ಕಂಡತ್. ಅವುಳ್ನ ಹತ್ರಕೆ ಎಳ್ದ್ ತಬ್ಬಿಹಿಡ್ದ್ ಅವಳ ಪೊರ್ಲ್‌ನ ಮುಖಕ್ಕೆ ಲೈಸೆನ್ಸ್ ಪಡ್ದ ತನ್ನ ಮೊದಲ ಮುತ್ತ್ ಕೊಟ್ಟತ್ ರಂಜನ್ !

* * *

ಬೆಳಿಗ್ಗೆ ಹತ್ತ್ ಗಂಟೆಗೆ ಬೋರ್‌ಗುಡ್ಡೆ ದೇವಯ್ಯ ಬ್ಯಾಂಕ್‌ಗೆ ಹೊರ್ಟತ್. ಅಷ್ಟರ್ಲಿ ಗೌರ ಅವನ ಹತ್ರಕೆ ಬಾತ್. ಒಂದ್ ಜೊತೆ ವಾಲೆದ್, ಕರಿಮಣಿ ತಾಳಿ ಮತ್ತ್ ರಂಜನ್ ಹಾಕಿದ್ದ ಉಂಗುರ ಇದಿಷ್ಟನ್ನ ಬುಟ್ಟ್ ಬಾಕಿ ಇದ್ದ ಎಲ್ಲಾ ಚಿನ್ನದ ಒಡವೆಗಳನ್ನ ಒಂದ್ ಪ್ಲಾಸ್ಟಿಕ್ ಬಾಕ್ಸ್‌ಲಿ ಹಾಕಿ ಕೈಲಿ ಹಿಡ್‌ಕಂಡ್ತ್.

ದೇವಯ್ಯ ಏನ್‌ಂತ ಕೇಳಿಕೆ ಕಣ್ಣ್ ಹೊರಳ್‌ಸಿಕಾಕನ ಗೌರ ಪ್ಲಾಸ್ಟಿಕ್ ಬಾಕ್ಸ್‌ಲಿದ್ದ ಚಿನ್ನದ ಒಡವೆಗಳನ್ನೆಲ್ಲ ತೆಗ್ದ್ ಮೇಜಿನ ಮೇಲೆ ಹಾಕಿತ್.

'ಇದ್ ಎಂತನೆ ಗೂಡೇ ! ಮೊದ್ವೆಕಳ್ದ್ ಇನ್ನೂ ಮೂರ್ ದಿನ ಆತ್‌ಲೆ ಅಷ್ಟ್ ಬೇಗ ಒಡವೆಗಳನ್ನೆಲ್ಲ ಬಿಚ್ಚಿ ಕೊಡ್ತಾ ಒಳಲ್ಲಾ?'

'ನನ್ನ ಪಪ್ಪ ಡೌರಿಂತ ಹೇಳಿ ನಂಗೆ ಕೊಟ್ಟದ್ ಬರೀ ನಲವತ್ತ್ ಸಾವ್ರ ಮಾತ್ರ. ಆದರೆ ನೀವು ನಂಗೆ ಎರಡ್‌ಲಕ್ಷ ರೂಪಾಯಿದ್ ಮಾಲ್ ಹಾಕಿಯೊಳರಿ. ನಾನ್ ಹಾಕಿದ ಮಾಲೇ ನಂಗೆ ಸಾಕ್ ಮಾಂವ. ಇದೆಲ್ಲಾ ನೀವ್ ಅಲ್‌ಮೇರಾದೊಳಗೆ ಮಡ್ಗಿ.'

ಅವಳು ಅಷ್ಟ್ ಹೇಳಿಬುಟ್ಟ್ ಒಳಗೆ ಹೋತ್.

'ಹ್ಂ ನಾಡ್‌ಕೊಲ್ಲಿ ಮಾದಪ್ಪನ ಗೂಡೆ ಸಣ್ಣ ಆಸಾಮಿಯೇನೂ ಅಲ್ಲ ! ಪುಕ್ಸಟೆ ಸಿಕ್ಕಿದ ಮಾಲ್‌ನ ಮೈತುಂಬ ಹಾಕ್ಕಂಡ್ ಮೆರ್‌ದದ್ ಸಾಕ್ ಗೂಡೆ.

ಅದರ್‍ನೆಲ್ಲಾ ಬೇಗ ಬಿಚ್ಚಿಬುಟ್ಟ್ ನನ್ನ ಕೈಗೆ ಕೊಡು ಅಂತ ಹೇಳೊಕೂಂತ ಗ್ಯಾನ ಮಾಡ್‌ಕಾಕನ ಈ ಬೋಸ್‌ಡಿ ಹಿಂಗೆ ಹೇಳಿ ಬುಡೊಕಾ...ಛೇ ನಂಗೆ ಹೇಳಿಕೆ ಅವ ಕಾಶ ಕೊಡದೇ ಹೋದಲ್ಲ ಗೂಡೆ... ದೇವಯ್ಯ ಗ್ಯಾನ ಮಾಡಿಕಂಡ್ ಇರ್ ಕಾಕನ ರಂಜನ್ ತೋಟ ತುಂಬ್ಸಿಕಂಡ್ ಕೋವಿ ತಗಂಡ್ ಬಾತ್.

'ಡ್ಯಾಡಿ ನಾನ್ ಒಮ್ಮೆ ಮಲೆಗೆ ಹೋಗಿ ಬನ್ನೆ. ಕಾಡ್ ಮಾಸ ತಿನ್ನದೆ ತುಂಬ ದಿನ ಆತ್. ಯಾಗ ನೋಡ್ರೂ ಆಡ್, ಕುರಿ, ಹಂದಿ, ಕೋಳಿ ಇದೇ ತಿಂದ್ ತಿಂದ್ ಬಿಡ್ದ್ ಹೋಗುಟ್ಟು.'

'ನಿನ್ನ ವಯಸ್ಸ್‌ಲಿ ನಾವೆಲ್ಲ ಉಪಾಸ ಬಿದ್ದದ್ದಕ್ಕೆ ಲೆಕ್ಕ ಮಿತಿ ಇಲ್ಲೆರ. ಅಂಬಲಿಗೂ ಉಪ್ಪಿನಕಾಯಿಗೂ ಕೂಡ ಬರ ಬಂದಿದ್ದ ಕಾಲ ಅದ್. ಹಲ್ಸಿನ್ ಬೀಜ ಬೇಯ್ಸಿ ತಿಂದ್ ಮಲ್‌ಗಿದ ದಿನ ಎಷ್ಟೋ ಉಟ್ಟ್. ಕಾಡ್‌ಲಿ ಸುತ್ತಿ ನನ್ನ ಕಾಲ್ ಸವುದ್ ಹೋಗಿತ್ತ್. ನೀನೆಲ್ಲ ಹುಟ್ಟದ ಮೇಲೆ ಕಾರ್ ಜೀಪ್‌ಲಿ ಅಲ್ದೆ ಬರಿಕಾಲಲಿ ತಿರ್‌ಗಿಯೊಳೊ ಹೇಳ್? ನಿಂಗೆಲ್ಲ ಉಚ್ಚೆ ಹುಯ್ಯಕೆ ಹೋಕೆ ಮೆಯಿಕಲ್ ಬೇಕ್. ಒಂದ್ ಹತ್ತ್ ಪೈಸೆ ಉತ್ಪತ್ತಿ ನಿಂಗೆ ಉಟ್ಟ ಹೇಳ್. ನಡಿ ನಡಿ ಇಲ್ಲಿಂದ...

ಡ್ಯಾಡಿದ್ ಮೂಡ್‌ಔಟ್ ಆಗುಟ್ಟೊತ ರಂಜನ್‌ಗೆ ಗೊತ್ತಾತ್. ಅಂವ ಅಲ್ಲಿಂದ ಉಪಾಯಲೇ ಹೊರಟತ್.

ಗೌರಂಗೆ ಆ ಮನೆಲಿ ಪುರುಸೊತ್ತಿಲ್ಲದ ಕೆಲ್ಸ ಇತ್ತ್.

'ಏ ಗೂಡೆ ಗೌರ ನಾನ್ ಮಲೆಗೆ ಬೇಟೆಗೆ ಹೋಗಿ ಬನ್ನೆ ಆತಾ. ಕಾಡ್ ಮಾಸ ತಿನ್ನದೆ ನಾಲಿಗೆ ಚಪ್ಪೆ ಆಗಿ ಹೋಗುಟ್ಟು'

ರಂಜನ್ ಹೇಳ್ತ್.

ಅಷ್ಟರ್ಲಿ ಮುತ್ತಕ್ಕಿ ಅಲ್ಲಿಗೆ ಬಂದ್ ಹೇಳ್ತ್,

ಅಲ್ಲಾ ಮಜ ಮೊದ್ಲೆ ಆದ್ಮೇಲಾದ್ರೂ ನಿಂಗೆ ಈ ಬೇಟೆ ಎಲ್ಲಾ ನಿಲ್ಸಿಕೆ ಆದುಲೆ. ಡ್ಯಾಡಿದ್ ಕೆಲ್ಸಲಿ ಸಹಾಯ ಮಾಡಿಕೆ ಆದುಲೆ ?

'ಹೆಲ್ಪ್ ಮಾಡೋಕು ಮಮ್ಮಿ, ಸೊಲ್ಪ ದಿನ ಕಳೀಲಿ ಮಾಡ್ನೆ'

ರಂಜನ್ ಒಂದ್ ಬ್ಯಾಗ್, ಕೋವಿ, ಕತ್ತಿ ತಗಂಡ್ ಜೀಪ್‌ಗೆ ಹತ್ತಿತ್.

[ಸಶೇಷ]

## ಪ್ರತಿಭಾವಂತ ಕಲೆಗಾರ ನೇರಂಗಿ ಎಸ್. ತೇಜಕುಮಾರ

ಕಿತ್ತ್ ಬಿಸಾಡ್ದ ಬೇರ್, ಮುರ್‍ಕಂಡ್‌ಬಿದ್ದ ಗೆಲ್ಲ್, ಡೊಂಕಿಕಂಡಿರ್‍ಪ ಕಂಟೆ–ಹಿಂಗೆ ಹೆಂಗಿದ್ದರೂ ಕೆಲಮ್ಮೆ ಅಲ್ಲ, ಎಲ್ಲವೂ ಅವೆಲ್ಲಾ ಸೌದೆ. ಆದ್ರೆ ತೇಜಕುಮಾರನ ಕಣ್ಣಿಗೆ ಅದೊಂದು ಪೊರ್ಲಾದ ವಸ್ತು ! ನಾಮ್ಗೆ–ನೀಮ್ಗೆಲ್ಲಾ ಬೇಡದಂಗೆ ಇರ್‍ಪ ಕಸ ಆ ಹೈದಂಗೆ ರಸ! ಜೀವಂತ ಅತ್ಯದ್ಭುತ ವಸ್ತು ! ಮಕ್ಕಳಾಟದ ವಸ್ತುಗ ನವಿಲೋ, ಹಾಂವೊ, ಕೋವಿಯೋ, ಮನುಷ್ಯನೋ ಹಿಂಗೆ ತೇಜನ ದೃಷ್ಟಿಯಂಗೆ ಆ ವಸ್ತುನ ಸೃಷ್ಟಿ.

ವಟವಟಾಂತ ಮಾತಾಡದೆ ನೀರಿಗೆ ಕಲ್ಲ್ ಹಾಕಿದಂಗೆ ಒಮ್ಮೊಮ್ಮೆ ಮಾತಾಡಿಕಂಡ್ ಯಾಗಾರ್ ಒಮ್ಮೆ ನಗಾಡ್ಟೆ.

ಬಿ. ಆರ್. ಜೋಯಪ್ಪ, ಮದೆ

ಹಂಗೆ ನಗಾಡಿರೂ ಎಂಥದೋ ಗ್ಯಾನ ಮಾಡಿಕಂಡೇ ಇರುವ ಕನಸ್‌ಕಾಣುವ ಈ ಹೈದನ ಬಗ್ಗೆ ಏನಾರ್ ತಿಳ್ಕಂಬನೊ.

ವಿರಾಜಪೇಟೆ ತಾಲೂಕ್‌ನ ಮಾಲ್ದಾರೆ ಹತ್ರ ಗುಡ್ಲೂರ್ ಇವನ ಜಾಗೆ. ನೇರಂಗಿ ಸೋಮಯ್ಯ [ಗಪ್ಪ] ಮತ್ತೆ ತಾಯಮ್ಮ [ಅವ್ವೆ] ಇವರ ನಡೂನ ಹೈದ. ಅಣ್ಣ ಸವಿಕುಮಾರ ಬೇಸಾಯ ಮಾಡ್ದೆ. ತಂಗಿ ರೂಪ ಈಗ 10ನೇ ಕ್ಲಾಸ್‌ಲಿ ಓದ್ತಾ ಉಟ್ಟ್.


ಅಪ್ಪನ ಹೆಗಲ್‌ಹತ್ತಿ ಕುಣಿಕಾದ ಹೊತ್ತ್‌ಲಿ ಅಪ್ಪನ ಕಳ್ಕಂಡತ್. ಅವ್ವನ ಕೈ ಕೂಸಾಗಿ, ಅವರಿವರ ಕಿರುಕುಳಾನ ತಡ್ಕಂಡ್ ಒಮ್ಮೊಮ್ಮೆ ಉಪಾಸ ಇದ್ದ್‌ಕಂಡ್ ಬೆಳ್ದ ಮಕ್ಕ ಇವು. ಅಣ್ಣ ಸವಿ ಓದಿದ್ ಮಡಿಕೇರಿ ತಾಲೂಕ್‌ನ ಮದೆ ಹೈಸ್ಕೂಲ್‌ಲೇ. ಈ ಹೈದನೂ 10ನೇ ಕ್ಲಾಸ್‌ಲಿ ಓದಿ ಪಾಸಾತ್. ಹಿಂಗೆ ಮೇಲೆ ಬಂದ ತೇಜ [ನವಿನ] ಮುಂದೆ ಯಂತ ಮಾಡ್ದುತ ಗ್ಯಾನ ಮಾಡ್ತಾ ಇತ್ತ್.

ಈ ಹೈದನ ಪೊರ್ಲನ ಅಕ್ಷರ ನೋಡೊಕು. ಚಿತ್ರನ ಬಾಳ್ಳಾಯ್ಕ ಬುಡ್ಸಿದೆ. ಕೆತ್ತನೆ ಕೆಲ್ಸನೂ ಗೊತ್ತುಟು. ಕಟ್ಲ್, ಬಾಗ್ಲ್, ಕಿಡಿಕೆ, ಏನ್ ಬೇಕಾರೂ ಮಾಡಿಕೆ ಗೊತ್ತುಟು. ಇಂವಂಗೇನಾರ್ ತರಬೇತಿ ಆಗುಟಾ ? ಇಲ್ಲೆ, ಖಂಡಿತ ತರ ಬೇತಿನೂ ಇಲ್ಲೆ. ಮತ್ತೆ ಹೆಂಗೆ ಈ ವಿದ್ಯಾನ ಕಲ್ತತ್ ! ಇದೆಲ್ಲಾ ಅಂವನ ಸ್ವಯಂ ಪ್ರತಿಭೆ !

ಒಮ್ಮೆ ಏನಾತ್‌ಂತೇಳಿರೆ : ಮಾಲ್ದಾರೆ ಮಿಡ್ಲಿಸ್ಕೂಲ್‌ಲಿ ಓದ್ತಾ ಇರ್‍ಕನ ಅಂವನ ಗುರುಗ ಮಕ್ಕಳ್ನೆಲ್ಲ ಗದ್ದಿಗೆ ಬೆಟ್ಟಕ್ಕೆ ಕರ್‍ಕಂಡ್ ಹೋಗಿದ್ರೊ. ಆ ಬೆಟ್ಟನೆಲ್ಲಾ ಸುತ್ತಾಡಿಕಂಡ್ ಬಂದ ಮೇಲೆ ಮಾಸ್ಟ್ರುಗ "ಮಕ್ಕಳೇ ಆ ಬೆಟ್ಟದ ಚಿತ್ರ ಬರೇನಿಂತ" ಹೇಳ್ದ್ರೊ. ಸರಿ, ಎಲ್ಲಾ ಮಕ್ಕ ಚಿತ್ರ ಬುಡ್ಸಿಕೊಟ್ರೊ. ಆ


[20ನೇ ಪುಟ ನೋಡಿ]

## ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಆಚರಿಸಲ್ಪಟ್ಟ ಹುತ್ತರಿ ಹಬ್ಬದ ದೃಶ್ಯ





## ಕೊಡಗು ಜಿಲ್ಲೆಗೆ "ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕಾ ಪ್ರತಿನಿಧಿ



ನರೇಂದ್ರ (ಷರಿ)

ದಿನಾಂಕ 1-11-1998 ರಿಂದ ಬಾಡಗ ಗ್ರಾಮದ ಶ್ರೀ ಸೆಟ್ಟೇಜನ ಮುದ್ದಯ್ಯನವರ ಮಗ ಶ್ರೀ ನರೇಂದ್ರ (ಷರಿ) ಇವರನ್ನು ಕೊಡಗು ಜಿಲ್ಲೆಯ ನಮ್ಮ ಪ್ರತಿನಿಧಿಯಾಗಿ ನೇಮಿಸಲಾಗಿದೆ. ಇವರಿಗೆ ನಮ್ಮ ಜನಾಂಗದವರು ಸಹಕರಿಸುವಂತೆ ಮನವಿ.

ಪ್ರತಿ ಶುಕ್ರವಾರ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5 ಗಂಟೆ ತನಕ ಕಛೇರಿಯ ವ್ಯವಹಾರದ ಸಮಯವಾಗಿದೆ

ಕಛೇರಿ ವಿಳಾಸ : C/o ನಂಗಾರು ಆಡಿಯೋ ವೀಡಿಯೋ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ, ಮಡಿಕೇರಿ-571 201.
ದೂರವಾಣಿ : **08272/29372**

ಹೋಕುತಾ ಆತ್. ಹಂಗೆ ಈ ಸಲ ಕಾರ್ತಿಂಗ್ಳಲಿ ಚೌಂಡಿಗೆ ಕೊಡಿಕಾಕನ ಮನೆಗೆ ಹೋದೆ. ಅಂದ್ ನನ್ನ ಗ್ರಹಾಚಾರಕ್ಕೆ ಯಾಗೊಳೂ ಬಾರದ ಮಳೆ ಜೋರಾಗಿ ಬಂದ್ ಬೇಜಾರಾತ್. ಈ ಕಳ್ದ 30 ವರ್ಷಲಿ ಪೊನ್ನ್ನು ಮಲಿಯ ಸತ್ತ್ ಮಣ್ಣಾಗಿತ್ತ್. ಅವನ ವಾರಿಸ್‌ದಾರಂಗೆ [ಪೊನ್ನ್ನು ಮಲಿಯಂಗೆ ಗಂಡ್ ಮಕ್ಕ ಇಲ್ಲೆ] ಪೂಜೆ ಮಾಡಿಕೆ ಬರುಕ್ಕುತ್ತಾ ಹೇಳಿ ಕಳ್ಸಿದ್ದೊ ಗಡ. ನಾನ್ ಬೆಳಗ್ಗೆ ಮನೆಗೆ ಹೋಗಿ ಕುಕ್ಕರಿಸಿ ಸಾಯಂಕಾಲ 3 ಗಂಟೆ ಆದರೂ ಅಂವ ಬಾತ್‌ಲೆ. ಇನ್ನ್ ಏನ್ ಮಾಡ್ದು, ಬೇರೆಯವನ ಕರ್‌ಕಂಡ್‌ಬಂದ್ ಪೂಜೆ ಮಾಡ್ದುತ್ತಾ ಮಾತಾಡಿಕ್ಯಂಡೆ ಅವನ ಹುಡ್ಕಿಕಂಡ್ ಹೊರಟೊ. ಅಂವ ಯಾರ್ದೊ ಕಾಫಿ ತೋಟಲಿ ಅಗ್ತೆ ಮಾಡ್ತಾ ಉಟ್ಟತ್ತಾ ಯಾರೋ ಹೇಳ್ದೊ. ಅಂತು ಇಂತು ಅಂವ ತೋಟಲಿ ಸಿಕ್ತ್. ಅಂವಂಗೆ ಕಥೆ ಎಲ್ಲಾ ಹೇಳಿ ಹೊರಡಿಕೆ ಹೇಳ್ದೊ. ಅಷ್ಟೊತ್ತಿಗೆ ಅಂವ "ನಂಗೆ ಸ್ನಾನ ಮಾಡಕು. ಅದ್ಕೆ ಮನೆಗೆ ಹೋಗಿ ಬನ್ನೆತಾ ಹೇಳ್ತ್. ನಾನ್ ಹೇಳ್ದೆ ಈಗಳೆ ಗಂಟೆ 4 ಆತ್. ಇನ್ನ್ ಮನೆಗೆ ಬೇರೆ ಹೋಗಿ ಬಂದರೆ ಹೊತ್ತಾದೆ, ಬೇಡ ಪೊಯಿತೇಳ್ದೆ. ಹೆಂಗಾರ್ ಮಾಡಿ ಅಂವನ ಅಪ್ಪಂಗಳವರೆಗೆ ಕರ್ಕ್ಯಂಡ್ ಬಂದೊ. ಅಲ್ಲಿ 2 ಪ್ಯಾಕೆಟ್ "ಕಾಟ" ಹಾಕಿದ ಮೇಲೆ ಅಂವಂಗೆ ಸ್ನಾನ ಮಾಡಕ್ಕುತ ಮರ್ತೆ ಹೋತ್. 2 ಪ್ಯಾಕೆಟ್ ಕಾಟ ಬಿಸಿಗೆ ಹೆಂಗೊ ಏನೋ ಮಾಡಿ ಚೌಂಡಿಗೆ ಪೂಜೆ ಮಾಡಿ ಕೋಳಿ ಕೊಯ್ದ್ ಆತ್. ಇನ್ನ್ ಆಚೆ ಕರೆಗೆ ನರಿಪೂವಂಗೆ ಬೇರೆ ಕೊಡಕು. ಅಷ್ಟು ಹೊತ್ತಿಗೆ ಅವಂಗೆ ಪುನಃ ಚಳಿ ಶುರ್ ಆತ್. ಪುನಃ ಅವನ ಮೈಬಿಸಿ ಮಾಡಿ, ಸೂಟೆ ಹೊತ್ತಿಸಿಕ್ಯಂಡ್ ನರಿಪೂದಂಗೆ ಕೊಡಿಕ್ಕೆ ಹೊಡೋ. ನಮ್ಮ ಕರ್ಮಕ್ಕೆ ನಾಣಿ ತೋಟಕ್ಕೆ ಆಗತೆ ಮಾಡ್ಸಿಕಾಕನ 'ನರಿಪೂದನ' ಕಲ್ಲ್‌ನ ಎಲ್ಲೊ ಬಿಸಾಕಿ ಬುಟ್ಟೊಳೊ. ಮಲಿಯ ಅಲ್ಲಿ ಇಲ್ಲಿ ತಬ್ಬರಿಸಿಕಂಡ್ ಪೋಲಿ ಮರದ ಕೆಳಗೆ 3 ಕೊಲ್ತಿ ಕುತ್ತಿತ್. ಅಷ್ಟ್ ಹೊತ್ತಿಗೆ ನನ್ನ ಕೈಲಿದ್ದ ಪುಣ್ಯಾರ್ಚನದ [ಬ್ರಾಹ್ಮಣ ಅಭಿಷೇಕ ಮಾಡಿದ ನೀರು] ಚೆಂಬು ಕೈಜಾರಿ ತಲೆ ಕೆಳಗಾಗಿ ಬೀತ್. ಅಂವ ಮೊದ್ಲೆ ಅಮುಲ್. ತೊಂದರೆ ಇಲ್ಲೆ ಜಾಗ ಶುದ್ಧ ಆತ್ ತಾ ಹೇಳ್ತ್' ಹೆಂಗೋ ಏನೊ ನರಿಪೂದಂಗೆ ಕೊಟ್ಟ್ ಆಕನ ಗಂಟೆ 8 ಆತ್. ಅಂವನ ಕೈ ಹಿಡ್ಕ್ಯಂಡ್ ಹೆಂಗೋ ಮನೆಗೆ ಬಂದೊ. ಅಂವ ಮೊಸ್ಲೆ ತಳ್ಪರೆ ಪಳ್ಪರೆ, ಆದರ ಮೇಲೆ ನಮ್ಮ ಆಚೆಕರೆ ಪುಟ್ಟುಗೆ ಮಲಿಯಂಗೆ ಸ್ವಲ್ಪ ಕೊಡದಿದ್ದರೆ ಸಮಾಧಾನ ಇಲ್ಲೆ. ಅಂವ ಅವನ ಹರಿಕೆ ತೀರ್ಸಿಕಾಕನ ಪೊನ್ನ್ನು ಮಲಿಯ ಗೋಡೆಗೆ ಒರಗಿತ್ ಮತ್ತೆ ಎದ್ದದ್ದ್ ಬೆಳಗ್ಗೆನೆ.

ಕೊಡಗ್‌ಂದ ದೂರ ಇರುವ ಎಷ್ಟೊ ಮಕ್ಕಳಿಗೆ ನಮ್ಮ ದೆವ್ವ ದೇವರು, ಚೌವುಂಡಿ, ನರಿಪೂದ ಏನ್ತ್ತೆಳಿರೆ ಗೊತ್ತ್‌ಲೆ. ಅದ್ಕೆ ಅವ್ಕೆ ನಮ್ಮ ಗೌಡರುಗಳಿಗೆ ದೆವ್ವ-ದೇವರು, ಆಚಾರ-ವಿಚಾರ ಸ್ವಲ್ಪ ಗೊತ್ತಿರ್ಲಿತ್ತೇಳಿ ಈ ಸಣ್ಣ ಕಥೆ ಬರ್ದೆ. ●

—ಪೂಜಾರೀರ ಗೋಪಾಲ, ಬೆಂಗಳೂರು.

## ಉಲ್ಕೆ ಬಿತ್ತ್ ನೋಡಿ....

ಪುಟ್ಟು ಎಂಟನೇ ಕ್ಲಾಸ್‌ಲಿ ಓದ್‌ತ್ತಿತ್. ಅಂದ್ ಸೈನ್ಸ್ ಮಾಸ್ಟರ್, ಮಕ್ಕಳೇ ಇಂದ್ ಮಧ್ಯರಾತ್ರಿ ಆಕಾಶಂದ ಉಲ್ಕೆ ಬಿದ್ದದೆ. ನೀವೆಲ್ಲಾ ನೋಡಿ ಮನೇಲಿ ಇದ್ದವಕೂ ತೋರ್ಸೊಕು ತೇಳ್ದೊ. ಕ್ಲಾಸ್‌ಂದ ಮನೆಗೆ ಬಂದ್ ಮನೆಲಿದವುಕೆ ವಿಷಯ ತಿಳ್ಸಿತ್. ಆದ್ರೆ ಮಧ್ಯರಾತ್ರಿಲಿ ಏಳೊಕಲೇತಾದಿ ಗ್ಯಾನ ಮಾಡಿ ಮಲಗಿತ್. ಸರಿ ಮಧ್ಯರಾತ್ರಿ ಆಕನ ಪುಟ್ಟುಗೆ ಎಚ್ಚರಾತ್. ಹೆಂಗೆ ತೇಳ್ರೆ ಇವಂಗೆ ರಾತ್ರಿ ಉಚ್ಚೆಗೆ ಎದ್ದ್ ಅಭ್ಯಾಸ ಇತ್ತ್. ಇಂತಹ ಸಂದರ್ಭಲಿ ಇಂದ್ ಆ ಅಭ್ಯಾಸ ಒಳ್ಳೆದಾತ್ ನೋಡಿ. ಹೊರಗೆ ಜಗ್ಲಲಿ ನಿತ್ತ್‌ಕಂಡ್ ಉಚ್ಚೆ ಹೊಯ್‌ಕಂಡ್ ಆಕಾಶ ಕಡೆ ನೋಡ್ತಾ ಇತ್ತ್. ಅಷ್ಟೊತ್ತಿಗೆ ಒಮ್ಮೆಗೆ ಬೆಳ್ಪಂಗೆ ಎಂತದೋ ಬಾಳೆಗಿಡ ಸೆರೆಂದ ಸೀದಾ ತೊಳಸಿಗಿಡ ಬುಡಕ್ಕೆ ಬಿದ್ದಂಗಾತ್. ಮಾಸ್ಟರ್ ಹೇಳ್ದ ಗ್ಯಾನ ಆತ್ ಇವಂಗೆ. ಉಲ್ಕೆ ಭೂಮಿಗೆ ಬಾಕನ ಸಣ್ಣ ಕಣನಂಗೆ ಇದ್ದದೆ, ಯಾವುದೇ ಹಾನಿ ಇಲ್ಲೇತಾ. ಇವ ಸೀದಾ ಒಳಗೆ ಹೋಗಿ ಗೊರಕೆ ಹೊಡಿತ್ತಿದ್ದ ಅಪ್ಪ, ಅಮ್ಮ, ಅಕ್ಕ ಎಲ್ಲರನ್ನ ಜೋರಾಗಿ ಕರ್ದ್ ಹೇಳ್ತ್. ಬನ್ನಿ ಬನ್ನಿ ಉಲ್ಕೆ ನೋಡಿತಾ. ಇವನ ಕೂಗಾಟಕ್ಕೆ ಎಲ್ಲವು ಎದ್ದೊ ಪಾಪ ಒಳ್ಳೆ ನಿದ್ರೆ ಟೈಂ. ಅಪ್ಪ ಬಂದ್ ಎಲ್ಲಿನೆ ಉಲ್ಕೆ ತೇಳ್ತ್. ಅಪ್ಪ, ನೋಡಪ್ಪ ಇಲ್ಲೆ ಬೀತ್ ತೇಳಿ ತೊಳಸಿಗಿಡ ಬುಡತೋರ್ಸಿತ್. ಅಪ್ಪ ಬಗ್ಗಿ ನೋಡಿ ನಿನ್ನ ತಲೆ ತೇಳಿ ಪುಟ್ಟುನ ತಲೆಗೆ ಬಾರ್ಸಿತ್. ಪಾಪ ಪುಟ್ಟು ಮರ್ಗ್ಟಕಂಡ್ ಒಳಗೆ ಬಾಕನ ಅಮ್ಮ ಕೇಳ್ದೊ. ಯಾಕೆ ಪುಟ್ಟು ಮರ್ಗ್ದುದುತಾ. ಅದಕ್ಕೆ ಅಂವ, ಅಮ್ಮ ಅಪ್ಪಂಗೆ ಉಲ್ಕೆ ತೋರ್ಸಿದೆ ಅದ್ಕೆ ಹೊಡ್ದೊ. ಅಷ್ಟೊತ್ತಿಗೆ ಅಪ್ಪಹೇಳ್ತ್, ಉಲ್ಕೆ ಇಲ್ಲೇ ಬದನೆಕಾಯಿ ಇಲ್ಲೇ. ಅದ್ ನಮ್ಮ "ಮಿಣಾಪುಳಿನೇ". ನಿಮ್ಮ ಹಾಳ್ ಸೈನ್ಸ್ ಬೇಡ, ಎಂತದು ಬೇಡಾ. ಮರ್ಯಾದೆಲೀ ನಾಳೆಂದ ಸೋಸೆಲ್ ಓದುತಾ. ಪುಟ್ಟುಗೆ ಅಪ್ಪನ ಮ್ಯಾಲೆ ಮತ್ತೆ ಮಾಸ್ಟರ್ ಮ್ಯಾಲೆ ಸಿಟ್ಟ್ ಬಾತ್. ಒಟ್ಟಿಗೆ ಸಮಾಧಾನ ಮಾಡ್‌ಕಂಡ್ತ್. ಹೆಂಗೆ ತೇಳ್ರೆ ಇನ್ನೊಮ್ಮೆ ಉಲ್ಕೆ ಬೀಳ್ಕನ ಇಬ್ಬರು [ಅಪ್ಪ, ಮಾಸ್ಟರ್] ಮಣ್ಣ್ ಮುಕ್ಕಿದ್ದವೇ ! ಅಲ್ಲಾ ? ●

—ಬಾರಿಕೆ ಲಿಂಗರಾಜ್, ತಾವೂರು.

ಚಿತ್ರಲಿ ತೇಜನ ಚಿತ್ರ ಬಾಳಾಯ್ಕ ಇತ್ತ್. ಮಾಸ್ಟ್ರಗಳಿಗೆ ಅದರ ನೋಡಿ ಖುಷೀ ಆತ್. ಬುತ್ತಿಬಟ್ಟನ ತಂದ್ ಇಂನಂಗೆ ಬೋನಸ್ ಕೊಟ್ಟೊ. ಹಿಂಗೆ ಅವು ಬೆನ್ನ್ ತಟ್ಟನೆ ಈ ಹೈದಂಗೆ ತಾನೊಬ್ಬ ಕಲಾಗಾರ ಆಕೊಂತ ಗ್ಯಾನ ಮಾಡಿ ಕಂಡತ್.

ಒಂದ್ಸರ್ತಿ ಇಂವ ತೆಂಗ್ನ ಮರದ ಮನುಷ್ಯ ಮಾಡ್ತ್. ನಾಲಿಗೆ ಕೆಂಪಾಗಿ ಹೊರಗೆ ನೀಂಡಿಕಂಡ್ ಇರ್ಪಂಗೆ ಮಾಡ್ತ್. ಹಿಂಗೆ ಮಾಡಿ ಮನೇಲಿ ಇಸಿ ಬಾಗ್ಲ್ಲಕಂಡ್ ಎತ್ತಳೋ ಹೋತು. ಇಂವ ಅತ್ತ ಹೋಗಿರ್ಕನ ಅವನ ಅಮ್ಮ ಬಂದ್ ಮನೆ ಬಾಗಿಲ್ ನೂಕಿ ಒಳಗೆ ನುಗ್ಗಿತ್. ಹಂಗೆ ನುಗ್ಗ್‌ಕನ ಯಾವನೋ ಒಳಗೆ ಕುದ್ದಂಗೆ ಕಂಡಾಕನ ಹೆದ್ರಿ ಅಯ್ಯಯ್ಯಪ್ಪೋಂತ ಕಿರ್‌ಚಿಕಂಡ್ ಹೊರಗೆ ಓಡ್ತ್. ಮತ್ತೆ ಗೊತ್ತಾತ್ತ ಈ ಹೈದ ಮಾಡಿ ಇಸಿದ ಗೊಂಬೆಂತ. ಸರಿ, ತೇಜ ವಾಪಾಸ್ ಬಾಕನ ಅಮ್ಮನ ರಂಪಾಟ ತಡೆಕೆ ಬೊತ್ತಾತ್ತ್. ಕಡೆಗೆ ಆ ಗೊಂಬೆನ ಕಣ್ಮರೆ ಮಾಡ್ದೊ ಗಡ. ಇನ್ನೊಮ್ಮೆ ಈ ಹೈದ ಒಂದ್ ಹಾಂವುನ ಕೆತ್ತಿ ಮಡ್ಗಿತ್. ಆಗೊಳೂ ಹಂಗೆ ಮನೆಯವೆಲ್ಲಾ ತಕುಪುಕಾದ ಗಡ. ಹಿಂಗೆ ಇಂವನ ಕೆಲ್ಸ ಒಂದೆರಡಲ್ಲ.

ಕ್ರಿಕೆಟ್ ಬ್ಯಾಟ್, ಬುಗುರಿ, ಕಾರ್, ಜೀಪು ಯಾವು ಯಾವ್ದೋ ಕೆತ್ತನೆ ಮಾಡ್ದೆ. ಚನ್ನಪಟ್ಣದ ಗೊಂಬೆ ತಯಾರ್ ಮಾಡುವವ್‌ಕೆ ಇಂಥ ಪ್ರತಿಭಾವಂತ ಹೈದ ಸಿಕ್ಕರೆ ಒಳ್ಳೆ ಸಂಪಾದ್ನೆ ಆದು. ಆದರೆ ಈ ಹೈದನ ಪ್ರತಿಭೆನ ಕಂಡ ಹಿರಿಯವು ಬೆಂಗ್ಳೂರ್ ಕಡೆ ದಾರಿ ತೋರ್ಸಿದೊ. ಅಲ್ಲಿ ಕರ್ನಾಟಕದ ಹೆಸರಾಂತ ಕಲಾವಿದರಾದ ಶ್ರೀ ಜಯದೇವ್ ಹತ್ರ ಸೇರ್ಸಿದೊ. ಅಲ್ಲಿ ಸುದೇಶ್ ಮಹಾನ್‌ಂತೇಳುವ ಕಲಾವಿದನ ಪರಿಚಯ ಇಂವಂಗಾತ್

ಶ್ರೀ ಜಯದೇವ್ ಅವ್ರ "ಕಲಾವೀರ್ ಆರ್ಟ್ಸ್"ಲಿ ಈ ಹೈದಂಗೆ ಈಗ ಕೈತುಂಬಾ ಕೆಲ್ಸ ಉಟ್ಟ್. ಮೈಸೂರ್ ವಸ್ತು ಪ್ರದರ್ಶನ ಉಟ್ಟಲೆ, ಅಲ್ಲಿಯು ತೊಟ್ಟಿಮನೆ, ಕಾಟಾ ಯೋಜನೆಯ ಮಾದರಿ ತಯಾರಿಕೆ, ಜಾನಪದ ಲೋಕಲಿ ನಿತ್ತ್‌ಕಂಡಿರುವ ಕೊಡವ ದಂಪತಿ, ಟಾಡಾ ಟೀ ಮತ್ತೆ ಕಾಫಿ ಕಂಪೆನಿಗೆ ಮಾರಾಟಂದ ಗಿನ್ನೀಸ್ ದಾಖಲೆಯ 22 ಅಡಿ ಎತ್ತರದ ಕಪ್, ಕಿಂಗ್ ಫಿಷರ್ ಬೀರ್‌ನ ನೊರೆ ಹರ್ಕಂಡ್ ಬಾದು ಮತ್ತೆ ಮೀನು ಕುಳ್ಳ ಹಕ್ಕಿದ್ ಚಿತ್ರ, ನಾಟಕದ ಮುಖವಾಡಗ, ಕೀಲ್‌ಕುದುರೆ "ನಿಶ್ಶಬ್ದ" ಸಿನಾಮ್ಮದ ನಾಯಿ, "ಗೆದಿಯಬೇಕು ಮಗಳಾ" ಹಾಡ್ನ ಹಾಡ್ದ ನಾಗಮಂಡಲದ ಜಯಶ್ರೀಗೆ ಕೀಲ್‌ಕುದುರೆ ಇವೇ ಮುಮಾರ್ ಥರದ ಕೆಲ್ಸಗಳ್ಲಿ ತೇಜಕುಮಾರನ ಕೈ ಓಡಾಡಿಟ್ಟ್. ಇಂವ ಒಂದಲ್ಲಾ ಒಂದಿನ "ಅತ್ಯುತ್ತಮ ಕಲಾಗಾರ"ಂತ ಹೆಸ್ರ್ ಮಾಡಲಿ. ಜಯದೇವ್‌ನಂತ ಗುರುಗ ಇವಂಗೆ ಸರಿ ದಾರಿ ತೋರ್ಸಿ ಕೊಡಗ್‌ನ ಪ್ರತಿಭೆ ಎಲ್ಲಾ ಕಡೆ ಬೆಳಗಲೀಂತ ನಾವ್ ಹಾರೈಸೊನೊ. ●

## ನಮ್ಮ ಮನೆ ಚೌವುಂಡಿ

ಸಾಮಾನ್ಯವಾಗಿ ಎಲ್ಲಾ ಗೌಡರುಗಳ ಮನೆಲಿ ಚೌವುಂಡಿ ಕಲ್ಲ್ ಇದ್ದಂಗೆ ನಮ್ಮ ಮನೇಲಿ ಸಹ ಒಂದು ಚೌವುಂಡಿ ಕಲ್ಲ್ ಉಟ್ಟ್. ನಾನ್ ಸಣ್ಣವನಾಗಿರ್ಕನ ಚೌವುಂಡಿ ಕಾಡ್‌ಲಿ ಕಲ್ಲ್ ಇತ್ತ್‌ಲೆ. ಅದ್ಕೆ ನಮ್ಮ ಅಪ್ಪ ದೂರಂದ ಜನಕ್ಕೆ ಕಾಣಲಿ ತೇಳಿ ಒಂದು ಉದ್ದದ ಕಲ್ಲ್‌ನ ತಂದ್ ಚೌವುಂಡಿ ಕಾಡ್‌ಲಿ ಹೂಣಿ ಇಟ್ಟಿತ್ತ್. ಆಗ ಬೆಳೆ ಕೆಲಸ ಆಗಿ ದನಗಳ ಗದ್ದೆಗೆ ಬುಡುವ ಸಮಯ. ನಮ್ಮ ಮುದಿ ಕೆಂದ ಎತ್ತ್‌ಗೆ ತೊರ್ಸ್ಸದು ಜಾಸ್ತಿ. ಒಂದು ದಿನ ಕೆಂದ ಎತ್ತ್ ಹುಲ್ಲ್ ಮೇದ್‌ಕಂಡ್ ಚೌವುಂಡಿ ಕಲ್ಲ್ ಹತ್ರ ಹೋತ್. ಎತ್ತಿಗೆ ಹೊಸ ಕಲ್ಲ್ ನೋಡಿ ತೊರ್ಸ್ಸದು ಜಾಸ್ತಿ ಆತ್ ಕಂಡದೆ. ಕಲ್ಲ್ ಹತ್ರಕೆ ಹೋಗಿ ಮೈ ಒರ್ಸಿಕೆ ಶುರು ಮಾಡ್ತ್. ಪಾಪ ಚೌವುಂಡಿ ಕಲ್ಲ್ ಕೆಳಗೆ ಬಿದ್ದ್ 2 ತುಂಡಾತ್. ಮಾರನೆ ದಿನ ಅಪ್ಪ ಅಂಗಡಿ ಕಡೆ ಹೋಕನ ಚೌವುಂಡಿ ಕಾಡ್‌ಲಿ ಕಲ್ಲ್ ಕಾಣದೆ ಗಾಬ್ರಿ ಆತ್. ಕಾಡ್ ಒಳಗೆ ಹೋಗಿ ನೋಡಿಕಾಕನ ಕಲ್ಲ್ ಬಿದ್ದ್ ತುಂಡಾದ್ ಕಂಡತ್ ಪಾಪ ಅಪ್ಪಂಗೆ ಕೆಂದ ಎತ್ತ್ ಮೈ ಒರಿಸಿಕಾಕನ ಕಲ್ಲ್ ಬಿದ್ದದ್ ಗೊತ್ತಾತ್ತ್‌ಲೆ. ಇದ್ ಏನೋ ಚೌವುಂಡಿದ್ ದೋಷ ಕಂಡದೆ ತ್ತೇಳಿ ಅಂಗಡಿ ಹತ್ರ ಇದ್ರ ಹಾರಂವನ ಹತ್ರ ಕೆಳಿಕೆ ಹೋತ್. ಹಾರಂವ, ಅಪ್ಪನ ಎಲ್ಲಾ ಕಥೆ ಕೇಳಿ ಆದ ಮೇಲೆ "ನೀವು ಒಂದು ಶನಿ ಪೂಜೆ ಮಾಡ್ನಿ, ಮತ್ತೆ ಬೇರೆ ಕಲ್ಲ್ ತಂದ್ ಹಾಕಿ" ತೇಳಿ ಹೇಳ್ತ್. ಅಪ್ಪ ಬಂದ್ ದೊಡ್ಡಣ್ಣನ ಹತ್ರ ಹಾರಂವ ಹೇಳ್ದ ವಿಷಯನ ಹೇಳ್ತ್, ಅದ್ಕೆ ದೊಡ್ಡಣ್ಣ ನಾನು ಚೌವುಂಡಿ ಕಲ್ಲ್‌ಗೆ ಗೋಡೆ ಕಟ್ಟಿಸಿನೆತ ಹೇಳ್ಕಂಡ್ತ್. ಅದೇ ಪ್ರಕಾರ ಗೋಡೆ ಸಹ ಕಟ್ಟಿಸಿ ಪ್ರತಿ ವರುಷ ಕೋಳಿ ಕೊಯಿತಾ ಹೋದೊ. ನಮ್ಮಲ್ಲಿ ಚೌವುಂಡಿಗೆ ಮಲಿಯನೆ [ತೆರೆ ಕಟ್ಟುವ] ಬಂದ್ ಪೂಜೆ ಮಾಡಕ್ಕು. ಅದೇ ಪ್ರಕಾರ ಪೊನ್ನುಮಲಿಯ ಬಂದ್ ಪ್ರತಿ ವರ್ಷ ಚೌವುಂಡಿಗೆ ಪೂಜೆ ಮಾಡಿ ಹೊಗ್‌ತ್ತಿತ್ತ್.

ನಾನ್ ಮನೆ ಬುಟ್ಟ್ ಮಿಲಿಟ್ರಿಗೆ ಹೋಗಿ 30 ವರ್ಷ ಆದ ಮೇಲೆ ಒಂದು ಸಲ ಚೌಂಡಿಗೆ ಕೊಡ್‌ಕಾಕನ ಮನೆಗೆ

[19ನೇ ಪುಟ ನೋಡಿ]

# ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ

**ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ**

ತಾರೀಖ್ **25-12-98**ರ ಶುಕ್ರವಾರ ದಿನ ಹೊತಾರೆ **10-30**ಕ್ಕೆ ಸರಿಯಾಗಿ ಮಡಿಕೇರಿಲಿ ಇರುವ ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರಾದ **ಶ್ರೀ ತುಮ್ಮುತ್ತಜೀರ ವೆಂಕಟೇಶ್ (ಗಣೇಶ್)** ಇವರ ಅಧ್ಯಕ್ಷತೆಲಿ ಸುರ್‌ನ ವರ್ಷದ ಮಹಾ ಸಭೆನ ನಡೆಸೊಕುತ ತೀರ್ಮಾನ ಮಾಡಿಳೊ. ಮಾನ್ಯ ಸದಸ್ಯರುಗ ಮಹಾ ಸಭೆಗೆ ಬಂದ್ ಕಾರ್ಯಕ್ರಮನ ಲಾಯ್ಕಾಗಿ ನಡ್ಸಿಕೊಡಕುತ ಕೇಳಿಕಂಡವೆ. ಮತ್ತೆ ಬರುವ ಸಾಲಿಗೆ ಹೊಸ ಆಡಳಿತ ಮಂಡಳಿ ಚುನಾವಣೆನ ಗೊತ್ತು ಮಾಡುವೆ. ಚುನಾವಣೆಗೆ ನಿಲ್ಲಿಕೆ ಇಷ್ಟ ಇದ್ದ ಸದಸ್ಯರ್‌ಗ ಆದೇ ದಿನ ಕೊತಾರೆ 10 ಗಂಟೆಗೆ ತನ್ಮ ತನ್ಮ ನಾಮಪತ್ರನ ಅಕಾಡೆಮಿ ಅಧ್ಯಕ್ಷರಿಗೆ ತಲುಪುಸಕು.

**—ಅಧ್ಯಕ್ಷ ಮತ್ತೆ ಆಡಳಿತ ಮಂಡಳಿಯವು**

---


**WITH BEST WISHES TO KODAGU SANGATHI**

From : **Katrathana Family**

Katrathana Rajesh Ullasa

**(Manager B. N. Enterprises Bangalore)**

Katrathana Sudish Ullasa

**(Accounts Dept. Seecon Services PVT. Ltd. Bangalore)**

Addreas :
Off : No. 8A, Thayappa Layout
Journalist Colony
J. C. Road Cross
Bangalore-560 002

Address :
Res : No. 111/3, Arun Nilaya,
5th Cross, Siddivinayaka Layout
Kathriguppe B S K III Stage,
Bangalore-560 085

**Phone : 080-6694773**

Katrathana K. Ullasa (Gopala)

Katrathana U. Kamini Ullasa

Address. **Balamuri Village, Madikeri T.Q, Kodagu D.T. Pin-571 252**

K R N N-240 10-01-96 TCI Kar. 09592

# ಡಾಕ್ಟರ್ ಡಿ. ಎಸ್. ಬಾಲಕೃಷ್ಣ M B.B.S.,D.A

ಕಿರು ಪರಿಚಯ : ಕಿರುಂದಾಡು ಗ್ರಾಮದ ದೇವಜನ [ಹೊಸೊಳ್ಳಿ] ದಿ|| ಸುಬ್ಬಯ್ಯ ಹಾಗೂ ಚಂದ್ರಮ್ಮ ದಂಪತಿಗಳ ಪ್ರಥಮ ಪುತ್ರರಾಗಿ 1962ರಲ್ಲಿ ಜನಿಸಿ. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಗೋಣಿಕೊಪ್ಪಲಿನ ಹತ್ತಿರದ ಗುಡ್ಡೆಮನೆ ಶಾಲೆಯಲ್ಲಿ ಪ್ರಾರಂಭಿಸಿ, ಮುಂದೆ 5ನೇ ತರಗತಿಯಿಂದ ಕಾಲೇಜುತನಕ ಗೋಣಿಕೊಪ್ಪಲು ಕಾಲೇಜಿನಲ್ಲಿ ಓದಿ ಮುಗಿಸಿದರು. ತಮ್ಮ ಐಚ್ಛಿಕ ವಿಷಯದಲ್ಲಿ [P.U.C.] ಶೇಕಡ 90 ಅಂಕಗಳನ್ನು ಪಡೆದು 78–79ರಲ್ಲಿ ಕಾಲೇಜಿಗೆ ಪ್ರಥಮ ರ್ಯಾಂಕ್ ಗಳಿಸಿ ಕೀರ್ತಿ ತಂದುದಲ್ಲದೆ ಜನ್ಮಕೊಟ್ಟ ತಂದೆ ತಾಯಿಯರಿಗೆ ಹೆಮ್ಮೆಯ ಪುತ್ರರಾಗಿ 1980 ರಲ್ಲಿ ಮೆಡಿಕಲ್ ಕಾಲೇಜು ಮೈಸೂರು ಅಲ್ಲಿ ಸೇರ್ಪಡೆಯಾದರು. ವೈದ್ಯಕೀಯ ರಂಗಕ್ಕೆ ಸೇರ್ಪಡೆಯಾಗುವ ಮುನ್ನ 1 ವರ್ಷ ಕಾಲ ಇಂಜಿನೀಯರಿಂಗ್ ಕಲಿತು ವೈದ್ಯಕೀಯದಲ್ಲೇ ಹೆಚ್ಚಿನ ಆಶಕ್ತಿ ಇದ್ದ ಕಾರಣ ಪುನಃ ಈ ರಂಗವನ್ನೇ ಆರಿಸಿಕೊಂಡರು. ಗೋಣಿಕೊಪ್ಪಲಿನಲ್ಲಿ ಕಾಲೇಜು ಅಥ್ಲೆಟಿಕ್ ಛಾಂಪಿಯನ್ ಸಹ ಆಗಿದ್ದರು. ತದನಂತರ 1989ರಲ್ಲಿ ಎಂ.ಬಿ.ಬಿ.ಎಸ್. ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದು 'ಅನೆಸ್ಥಿಸಿಯಾ' ತಜ್ಞರಾಗಿ ಕಳೆದ ಎಂಟು ವರ್ಷಗಳಿಂದ ಹಾಸನದ ಖಾಸಗೀ ಆಸ್ಪತ್ರೆಯೊಂದರಲ್ಲಿ ದುಡಿಯುತ್ತಿದ್ದಾರೆ.

ಇತ್ತೀಚೆಗಷ್ಟೆ ಡಾ|| ಬಾಲಕೃಷ್ಣರವರು ತಮ್ಮ ಗೃಹಸ್ಥಜೀವನಕ್ಕೆ ಕಾಲಿಟ್ಟು, ಚಿಕ್ಕಮಗಳೂರು ಜಿಲ್ಲೆಯ ಮಲ್ಲಂದೂರು ಶ್ರೀ ಅಣ್ಣಯ್ಯ ಪಟೇಲರ ಸುಪುತ್ರಿ ಚಿ. ಸೌ. ಸುಲೋಚನಾ ಅವರನ್ನು ವೈಭವದಿಂದ ತನ್ನ ಬಾಳ ಸಂಗಾತಿಯನ್ನಾಗಿ ಮಾಡಿಕೊಂಡಿದ್ದಾರೆ. ಅರೆಭಾಷಾಭಿಮಾನಿಗಳಾದ ಇವರು ನಮ್ಮ ಗೌಡ ಸಂಸ್ಕೃತಿಯ ಸಂಪ್ರದಾಯಿಕ ಉಡುಪು ತೊಡುಪುಗಳು ಮತ್ತು ಅದರ ವೈಶಿಷ್ಟಿಕೆಯನ್ನೂ ಹಾಗೂ ಸರ್ವ ಶಾಸ್ತ್ರಗಳನ್ನು ಉಳಿಸಿ ಬೆಳೆಸಿಕೊಂಡು ತಮ್ಮಂತಹವರಿಗೆ ಹಿರಿಯರ ಮಾರ್ಗದರ್ಶನದ ಅವಶ್ಯಕತೆ ಇದೆ ಅನ್ನುತ್ತಾರೆ. ಮುಂದೆ ಸ್ವಂತ ಜಿಲ್ಲೆಗೆ ಬಂದು ಅದೃಷ್ಟ ಒದಗಿ ಬಂದಾಗ ಸ್ವಂತ ಖಾಸಗೀ ಆಸ್ಪತ್ರೆಯೊಂದನ್ನು ತೆರೆಯುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ.

ನವದಂಪತಿಗಳಿಗೆ ಅವರ ದಾಂಪತ್ಯ ಜೀವನದುದ್ದಕ್ಕೂ ಹಾಗೂ ಅವರ ವೈದ್ಯಕೀಯ ರಂಗದಲ್ಲೂ ಇನ್ನೂ ಹೆಚ್ಚಿನ ಶ್ರೇಯಸ್ಸನ್ನು ನಮ್ಮ ಕುಲದೇವರಾದ ಶ್ರೀ ವೆಂಕಟರಮಣ ಸ್ವಾಮಿಯು ಕರುಣಿಸಲಿ ಮತ್ತು ಸರ್ವ ಜನಾಂಗಕ್ಕೆ ಅವರ ಸೇವೆ ನೆರವಾಗಲೆಂದು ಕೊಡಗು ಸಂಗಾತಿ ಹಾರೈಸುತ್ತದೆ.

ವರದಿ : **ಬೈತಡ್ಕ ಎ. ಬೆಳ್ಯಪ್ಪ**
ಮಡಿಕೇರಿ

Printed by M K Thammaiah and Published by Kodagu Sangatni on behalf of Pattada P. Sheelamani & Printed at ASHIRWAD PRINTERS 180/A, 6th Main, Vinayakanagar, Mysore-12 Published at Mysore. Editor PATTADA P. SHEELAMANI. No 35 1st Cross, 4th Block, Near Divisional Telephone Office) Jayalakshmipuram, Mysore-570 012. Phone : 516771